ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

## ಮಾಸಪತ್ರಿಕೆ

# JSS VARTHAPATHRA

*Monthly Magazine*

ಸಂಪುಟ 7 ಸಂಚಿಕೆ 5 ಮೇ 2022




ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ನೆರವೇರಿದ 13ನೇ ಪದವೀಧರ ದಿನಾಚರಣೆಯ ಮುಖ್ಯ ಅತಿಥಿಗಳಾಗಿ ಕೇಂದ್ರ ಸರ್ಕಾರದ ಶಿಕ್ಷಣ ಮತ್ತು ವಿದೇಶಾಂಗ ಇಲಾಖೆ ರಾಜ್ಯ ಖಾತೆ ಸಚಿವರಾದ ಸನ್ಮಾನ್ಯ ಡಾ. ರಾಜ್‌ಕುಮಾರ್ ರಂಜನ್ ಸಿಂಗ್‌ರವರು ಭಾಗವಹಿಸಿದ್ದರು. ಡಾ. ಎಚ್.ಬಿ. ಸುರೇಶ್, ಪ್ರೊ. ದೇಬಲ ದೇವಿ, ಶ್ರೀ ಎಲ್. ನಾಗೇಂದ್ರ, ಡಾ. ಸಿ.ಜಿ. ಬೆಟಸೂರಮಠ, ಡಾ. ಕೆ.ವಿ. ಸುರೇಶ, ಮತ್ತು ಶ್ರೀ ಎಂ.ಎಂ. ಸ್ವಾಮಿಯವರುಗಳೊಂದಿಗೆ ಪ್ರಶಸ್ತಿ ಪುರಸ್ಕೃತ ಪದವೀಧರರಿದ್ದಾರೆ (30 ಏಪ್ರಿಲ್ 2022)



ಸುತ್ತೂರು ಶ್ರೀಕ್ಷೇತ್ರಕ್ಕೆ ಗೋಕುಲ ಎಜುಕೇಷನ್ ಟ್ರಸ್ಟ್‌ನ ಅಧ್ಯಕ್ಷರು ಹಾಗೂ ಕೈವಾರ ತಾತಯ್ಯ ಕ್ಷೇತ್ರದ ಧರ್ಮಾಧಿಕಾರಿಗಳು ಆದ ಡಾ. ಎಂ.ಆರ್. ಜಯರಾಮ್‌ರವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಆಶೀರ್ವದಿಸಿದರು




ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ಜಗದ್ಗುರು ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಮಹೋತ್ಸವದ ಅಂಗವಾಗಿ ಮಹಾವಿದ್ಯಾಪೀಠದಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ 2019–20ನೇ ಸಾಲಿನಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ ನಿವೃತ್ತರಾದ 189 ಜನರನ್ನು ಅಭಿನಂದಿಸಲಾಯಿತು (13 ಏಪ್ರಿಲ್ 2022)

# ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಅಂಗವಾಗಿ ವಿವಿಧ ಕಾರ್ಯಕ್ರಮಗಳು

**ಪರಮಪೂಜ್ಯ ಜಗದ್ಗುರು ರಾಜಗುರುತಿಲಕ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಅಂಗವಾಗಿ ಮೈಸೂರಿನ ಸುತ್ತೂರು ಶ್ರೀಮಠದಲ್ಲಿ ದಿನಾಂಕ 13.4.2022ರಂದು ನಿವೃತ್ತ ನೌಕರರಿಗೆ ಅಭಿನಂದನೆ, ಪ್ರಸಾದ ಸಂಚಿಕೆಯ ವಾರ್ಷಿಕ ಲೇಖನ ಸ್ಪರ್ಧೆಯ ವಿಜೇತರು ಮತ್ತು ಜೆಎಸ್‌ಎಸ್ ಸಂಸ್ಥೆಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ ವಿತರಣೆ, ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿವೇತನ, ಜೆಎಸ್‌ಎಸ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮಗಳನ್ನು ನಡೆಸಲಾಯಿತು.**

## ನಿವೃತ್ತ ನೌಕರರಿಗೆ ಅಭಿನಂದನೆ

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರಿಗೆ ಪ್ರಿಯವಾಗಿದ್ದ ಸೇವಾಮನೋಭಾವವನ್ನು ನಿವೃತ್ತಿಯ ನಂತರ ಸ್ವಯಂಸೇವೆಯಲ್ಲಿ ತೊಡಗಿಸಿಕೊಳ್ಳುವುದರ ಮೂಲಕ ಬೆಳೆಸಿಕೊಳ್ಳಬೇಕೆಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆಸಲ್ಲಿಸಿ 2020–21ನೇ ಸಾಲಿನಲ್ಲಿ ನಿವೃತ್ತರಾದವರಿಗೆ ಅಭಿನಂದಿಸಿ ಆಶೀರ್ವದಿಸುತ್ತಾ ಕಾಯಕ ಯಾವುದು ಎಂಬುದು ಮುಖ್ಯವಲ್ಲ, ಕಾಯಕದಲ್ಲಿ ಯಾವುದು ಕಡಿಮೆಯಲ್ಲ; ಯಾವುದೂ ಹೆಚ್ಚಲ್ಲ. ಎಲ್ಲಾ ಕಾಯಕವು ಮಹತ್ವದ್ದಾಗಿರುತ್ತದೆ. ಅದನ್ನು ಶ್ರದ್ಧೆ, ನಿಷ್ಠೆ ಮತ್ತು ಪ್ರಾಮಾಣಿಕತೆಯಿಂದ ನಿರ್ವಹಿಸುವುದು ಮುಖ್ಯ ಎಂದು ತಿಳಿಸಿದರು.

2020–21ರಲ್ಲಿ ನಿವೃತ್ತರಾದ ನೌಕರರ ಪರಿಚಯದ 'ತೇರನೆಳೆದವರು' ಪುಸ್ತಕವನ್ನು ಪರಮಪೂಜ್ಯ ಜಗದ್ಗುರುಗಳವರು ಬಿಡುಗಡೆ ಮಾಡಿದರು.


ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ವಿವಿಧ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿ 2020–21ರಲ್ಲಿ ನಿವೃತ್ತರಾದ ಒಟ್ಟು 189 ನೌಕರರಲ್ಲಿ 141 ನೌಕರರು ಹಾಜರಿದ್ದು ಪರಮಪೂಜ್ಯ ಜಗದ್ಗುರುಗಳವರಿಂದ ಆಶೀರ್ವಾದಪೂರ್ವಕ ಅಭಿನಂದನೆಯನ್ನು ಸ್ವೀಕರಿಸಿದರು.

ನೌಕರಿಯ ದಿನಗಳ ಅನುಭವಗಳನ್ನು ಹಂಚಿಕೊಂಡ ನೌಕರರಾದ ಡಾ. ರುದ್ರಮೂರ್ತಿಯವರು ಗ್ರಾಮೀಣ ಪ್ರದೇಶದಿಂದ ಬಂದ ನನಗೆ ಪರಮಪೂಜ್ಯರ ಆಶೀರ್ವಾದ, ಅನುಕಂಪ, ಕಾರುಣ್ಯ ಮತ್ತು ಬೆಂಬಲದಿಂದ ಔದ್ಯೋಗಿಕ ಕ್ಷೇತ್ರದಲ್ಲಿ ಬೆಳೆಯಲು ಸಾಧ್ಯವಾಯಿತು ಎಂದರು. ಶ್ರೀ ಎಂ.ಎಂ. ಪ್ರಭುಸ್ವಾಮಿಯವರು ಜೆಎಸ್‌ಎಸ್ ಸಂಸ್ಥೆಯಲ್ಲಿನ ವೃತ್ತಿ ಅನುಭವ ಅದ್ಭುತವಾದದ್ದು. ಇಲ್ಲಿನ ಅನುಭವದಿಂದ ನಾನು ಮತ್ತೊಂದು ಸಂಸ್ಥೆಯಲ್ಲಿ ನಿವೃತ್ತಿಯ ನಂತರವೂ ಸಮರ್ಥವಾಗಿ ನಾಯಕತ್ವದ ಗುಣದೊಂದಿಗೆ ಪ್ರಾಚಾರ್ಯನಾಗಿ ಕಾರ್ಯನಿರ್ವಹಿಸಲು ಸಾಧ್ಯವಾಗಿದೆ ಎಂದರು. ಶ್ರೀ ನಾ. ಮಹಾವೀರ ಪ್ರಸಾದ್‌ರವರು ಸಂಸ್ಥೆಯಲ್ಲಿ ಸಾಹಿತ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿದ ಅನುಭವ ಉತ್ತಮವಾಗಿತ್ತು ಎಂದರು.

ಇದೇ ಸಂದರ್ಭದಲ್ಲಿ 2020–21ರ ಸಾಲಿನ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರವನ್ನು ಹಾಗೂ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು. ಪ್ರಸಾದ ದ್ವೈಮಾಸಿಕ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಮತ್ತು ಸಂಸ್ಥೆಗಳ 2019–20ನೇ ಸಾಲಿನ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ನಿವೃತ್ತರುಗಳ ಪರಿಚಯವನ್ನು ಶ್ರೀ ಗುರುಪ್ರಸಾದ್, ಶ್ರೀ ಯೋಗೀಶ್ ಚುಂಚನಹಳ್ಳಿ, ಶ್ರೀಮತಿ ಎಚ್.ಎಸ್. ಅಂಬಿಕಾ, ಡಾ. ಭೀಮರಾಜ್, ಶ್ರೀಮತಿ ಡಿ.ಎಸ್. ಅಂಬಿಕಾ, ಡಾ. ಪಳನಿಸ್ವಾಮಿ, ಶ್ರೀ ಮಹಮದ್ ಅಂಜುಂಪಾಷ, ಶ್ರೀಮತಿ ಪಿ. ರಶ್ಮಿ, ಶ್ರೀಮತಿ ಎಚ್.ಎನ್. ಮಾನಸ ಮತ್ತು ಶ್ರೀ ಕೆ.ವಿ. ಯೋಗೀಶ್‌ರವರುಗಳು ನಡೆಸಿಕೊಟ್ಟರು.

## ಪ್ರಸಾದ ಸಂಚಿಕೆಯ ವಾರ್ಷಿಕ ಲೇಖನ ಸ್ಪರ್ಧೆಯ ಬಹುಮಾನ ವಿತರಣೆ



2020–21ನೇ ಸಾಲಿನ ಪ್ರಸಾದ ದ್ವೈಮಾಸಿಕ ಲೇಖನ ಸ್ಪರ್ಧೆಯ ವಿಜೇತರಿಗೆ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಬಹುಮಾನ ವಿತರಿಸಲಾಯಿತು. ಶ್ರೀಗಳವರೊಂದಿಗೆ ಬಹುಮಾನ ವಿಜೇತ ವಿದ್ಯಾರ್ಥಿಗಳಿದ್ದಾರೆ.

2020–21ನೇ ಸಾಲಿನ ಪ್ರಸಾದ ವಾರ್ಷಿಕ ಲೇಖನ ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಅತ್ಯುತ್ತಮ ಲೇಖನಗಳಿಗೆ ಪರಮಪೂಜ್ಯ ಜಗದ್ಗುರುಗಳವರು ಬಹುಮಾನಗಳನ್ನು ವಿತರಿಸಿದರು.

ಶೇಷಾದ್ರಿಪುರಂ ಪದವಿಪೂರ್ವ ಕಾಲೇಜಿನ ಕು. ಎನ್. ಅಭಿಶ್ರೀ, ಸದ್ವಿದ್ಯಾ ಸೆಮಿರೆಸಿಡೆನ್ಸಿಯಲ್ ಪದವಿಪೂರ್ವ ಕಾಲೇಜಿನ ಕು. ಸ್ಫೂರ್ತಿ ಆನಂದ್, ಊಟಿ ರಸ್ತೆಯ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಕು. ಎಂ. ಸುಜಾತ, ದೇವಲಾಪುರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಶ್ರೀ ಟಿ.ಸಿ. ಮಧುಕುಮಾರ್, ಗುಂಡ್ಲಪೇಟೆಯ ಜೆಎಸ್‌ಎಸ್ ಕಲಾ, ವಾಣಿಜ್ಯ ಕಾಲೇಜಿನ ಕು. ಎನ್. ಯಶಸ್ವಿನಿ, ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕು. ಪಿ. ಮಾದಲಾಂಬಿಕ ಇವರುಗಳು ಕ್ರಮವಾಗಿ ಪ್ರಥಮ, ದ್ವಿತೀಯ, ತೃತೀಯ, ನಾಲ್ಕನೆಯ ಮತ್ತು ಪ್ರೋತ್ಸಾಹಕ ಬಹುಮಾನಗಳನ್ನು ಪಡೆದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಪ್ರಕಟಣ ವಿಭಾಗದ ಗೌರವ ಸಂಪಾದಕರಾದ ಶ್ರೀ ಆರ್.ಎಸ್. ಪೂರ್ಣಾನಂದರವರು ಪಟ್ಟಿಯನ್ನು ಓದಿದರು.

ಒಲೆ ಹತ್ತಿ ಉರಿದಡೆ ನಿಲಬಹುದಲ್ಲದೆ
ನೆಲ ಹತ್ತಿ ಉರಿದಡೆ ನಿಲಲುಬಹುದೆ?
ಏರಿ ನೀರುಂಬಡೆ ಬೇಲಿ ಕೆಯ್ಯ ಮೇವಡೆ
ನಾರಿ ತನ್ನ ಮನೆಯಲ್ಲಿ ಕಳುವಡೆ
ತಾಯ ಮೊಲೆವಾಲು ನಂಜಾಗಿ ಕೊಲುವಡೆ
ಇನ್ನಾರಿಗೆ ದೂರುವೆನಯ್ಯಾ ಕೂಡಲಸಂಗಮದೇವಾ ?

– ಬಸವಣ್ಣ

## ಜೆಎಸ್‌ಎಸ್ ಸಂಸ್ಥೆಗಳ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ



ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳ 2019–20ನೇ ಸಾಲಿನ ಉತ್ತಮ ವಾರ್ಷಿಕ ಸಂಚಿಕೆಗಳಿಗೆ ಬಹುಮಾನ ವಿತರಿಸಲಾಯಿತು. ಸಂಸ್ಥೆಗಳ ಮುಖ್ಯಸ್ಥರುಗಳು, ಬೋಧಕರು ಹಾಗೂ ಸಂಚಿಕೆಗಳ ಸಂಪಾದಕರುಗಳಿದ್ದಾರೆ

2019–20ನೇ ಸಾಲಿನ ವಾರ್ಷಿಕ ಸಂಚಿಕೆಗಳಿಗೆ ಬಹುಮಾನಗಳನ್ನು ಪರಮಪೂಜ್ಯ ಜಗದ್ಗುರುಗಳವರು ವಿತರಿಸಿದರು.

ನಾಲ್ಕು ವಿಭಾಗಗಳಲ್ಲಿ 12 ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಬಹುಮಾನ ಪಡೆದುಕೊಂಡರು. ವಿಭಾಗ 1ರಲ್ಲಿ ಶ್ರೀ ಜಯಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜು, ಜೆಎಸ್‌ಎಸ್ ವೈದ್ಯಕೀಯ ಕಾಲೇಜು ಹಾಗೂ ಜೆಎಸ್‌ಎಸ್ ಮಹಿಳಾ ಪಾಲಿಟೆಕ್ನಿಕ್‌ಗಳು, ವಿಭಾಗ 2ರಲ್ಲಿ ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜು, ನಂಜನಗೂಡಿನ ಜೆಎಸ್‌ಎಸ್ ಕಾಲೇಜು ಹಾಗೂ ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜುಗಳು, ವಿಭಾಗ–3ರಲ್ಲಿ ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜು, ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆ ಹಾಗೂ ನಂಜನಗೂಡಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜುಗಳು, ವಿಭಾಗ–4ರಲ್ಲಿ ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆ, ಶ್ರೀ ಶಿವರಾತ್ರೀಶ್ವರನಗರದ ಜೆಎಸ್‌ಎಸ್ ಪ್ರೌಢಶಾಲೆ ಹಾಗೂ ಚಾಮರಾಜನಗರದ ಜೆಎಸ್‌ಎಸ್ ಬಾಲಕರ ಪ್ರೌಢಶಾಲೆಗಳು ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಬಹುಮಾನಗಳನ್ನು ಪಡೆದವು.

ಬೆಟ್ಟದ ಮೇಲೊಂದು ಮನೆಯ ಮಾಡಿ
ಮೃಗಗಳಿಗಂಜಿದಡೆಂತಯ್ಯಾ
ಸಮುದ್ರದ ತಡಿಯಲೊಂದು ಮನೆಯ ಮಾಡಿ
ನೊರೆ ತೆರೆಗಳಿಗಂಜಿದಡೆಂತಯ್ಯಾ
ಸಂತೆಯೊಳಗೊಂದು ಮನೆಯ ಮಾಡಿ
ಶಬ್ದಕ್ಕೆ ನಾಚಿದಡೆಂತಯ್ಯಾ
ಚನ್ನಮಲ್ಲಿಕಾರ್ಜುನದೇವ ಕೇಳಯ್ಯಾ
ಲೋಕದೊಳಗೆ ಹುಟ್ಟಿದ ಬಳಿಕ ಸ್ತುತಿನಿಂದೆಗಳು ಬಂದಡೆ
ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು

**–ಅಕ್ಕಮಹಾದೇವಿ**

## ಜೆಎಸ್‌ಎಸ್ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ವಿದ್ಯಾರ್ಥಿವೇತನ ವಿತರಣೆ



ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಪ್ರಸಾದನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದಿಂದ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ 2020–21ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಕಾರ್ಯದರ್ಶಿಗಳಾದ ಶ್ರೀ ಎಂ.ಎಂ. ಸ್ವಾಮಿ, ಉಪಾಧ್ಯಕ್ಷರಾದ ಡಾ. ಎಂ. ನಂಜುಂಡಪ್ಪ ಹಾಗೂ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿದ್ದಾರೆ.


ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಪ್ರಸಾದ ನಿಲಯಗಳ ಹಿರಿಯ ವಿದ್ಯಾರ್ಥಿಗಳ ಸಂಘದ ವತಿಯಿಂದ ವಿದ್ಯಾರ್ಥಿನಿಲಯಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಗುರುತಿಸಿ ವಿದ್ಯಾರ್ಥಿವೇತನವನ್ನು ವಿತರಿಸಲಾಯಿತು.

ಜೆಎಸ್‌ಎಸ್ ಪ್ರಧಾನ ಭವನದ ಶ್ರೀ ಎಂ.ಎಸ್. ಮಧುಕುಮಾರ್, ಶ್ರೀ ವಿ.ಎಸ್. ಚಂದು, ಶ್ರೀ ಎನ್. ನವೀನ್ ಪಾಟೀಲ್, ಶ್ರೀ ಎಂ.ಸಿ. ದರ್ಶನ್, ಶ್ರೀ ಸಿ.ಆರ್. ನಿಖಿತ್, ಶ್ರೀ ಎಸ್.ಜಿ. ಮನೋಜ್‌ಕುಮಾರ್, ಶ್ರೀ ಎಂ. ನಿತಿನ್ ಮತ್ತು ಶ್ರೀ ರಕ್ಷಿತ್, ರಾಮಾನುಜ ರಸ್ತೆಯ ಜೆಎಸ್‌ಎಸ್ ವಿದ್ಯಾರ್ಥಿನಿಲಯದ ಶ್ರೀ ಹೆಚ್.ಎ. ಭರತ್, ಶ್ರೀ ಎಂ. ಮಹೇಂದ್ರ, ಶ್ರೀ ಜಿ. ಗವಿಸ್ವಾಮಿ, ಶ್ರೀ ಎನ್.ಎಸ್. ಯಶವಂತ್ ಮತ್ತು ಶ್ರೀ ಆರ್. ವಿಶಾಲ್, ಮಾಧವಾಚಾರ್ ರಸ್ತೆಯ ಕೆ.ಎಸ್.ಎಸ್ ಅನಾಥಾಲಯದ ಶ್ರೀ ಜೆ. ಶಶಿಕುಮಾರ್, ಶ್ರೀ ಸಂಜಯ್‌ಕುಮಾರ್, ಶ್ರೀ ವಿಶ್ವನಾಥ್ ಎಸ್ ಮಡಿವಾಳರ, ಶ್ರೀ ಜಿ. ಆಕಾಶ್ ಮತ್ತು ಶ್ರೀ ಡಿ.ಎಸ್. ಗೌತಮ್‌ರವರುಗಳಿಗೆ 2020–21ನೇ ಶೈಕ್ಷಣಿಕ ಸಾಲಿನ ವಿದ್ಯಾರ್ಥಿ ವೇತನವನ್ನು ಹಿರಿಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷರಾದ ಡಾ. ಎಂ. ನಂಜುಂಡಪ್ಪನವರು ವಿದ್ಯಾರ್ಥಿವೇತನ ವಿತರಿಸಿದರು. □

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಜಂಕಿಸಿ ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ
ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ
ಆಗಲಿ, ಮಹಾಪ್ರಸಾದವೆಂದೆನಯ್ಯಾ
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ
ನಾನು ಬೆರಗಾದೆನು

**– ಅಲ್ಲಮಪ್ರಭು**

## ಜೆಎಸ್‌ಎಸ್ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ




ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳಲ್ಲಿ 2020–21ನೇ ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತಿಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಲಾಯಿತು. ಪೂಜ್ಯರೊಂದಿಗೆ ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳಿದ್ದಾರೆ.

ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 106ನೇ ಜಯಂತಿ ಅಂಗವಾಗಿ ಏರ್ಪಡಿಸಲಾಗಿದ್ದ ನಿವೃತ್ತ ನೌಕರರ ಅಭಿನಂದನಾ ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಸಂಸ್ಥೆಗಳಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ 2020–21ನೇ ಶೈಕ್ಷಣಿಕ ಸಾಲಿನಲ್ಲಿ ಅತಿ ಹೆಚ್ಚು ಅಂಕಗಳಿಸಿದ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಪರಮಪೂಜ್ಯ ಜಗದ್ಗುರುಗಳವರು ಪ್ರತಿಭಾ ಪುರಸ್ಕಾರ ನೀಡಿ ಪ್ರೋತ್ಸಾಹಿಸಿದರು.

ಚಾಮರಾಜನಗರದ ಜೆಎಸ್‌ಎಸ್ ಬಾಲಕಿಯರ ಪ್ರೌಢಶಾಲೆಯ ಕು. ಎ.ಎಸ್. ನಂದಿನಿಯವರು ಎಸ್‌ಎಸ್‌ಎಲ್‌ಸಿಯಲ್ಲಿ ಅತಿ ಹೆಚ್ಚು ಅಂಕ ಪಡೆದು ಪುರಸ್ಕೃತರಾದರು. ಪದವಿಪೂರ್ವ ಕಾಲೇಜುಗಳಲ್ಲಿ ಕಲಾ ವಿಭಾಗದಲ್ಲಿ ಕೊಳ್ಳೇಗಾಲ ಜೆಎಸ್‌ಎಸ್ ಬಾಲಕಿಯರ ಪದವಿಪೂರ್ವ ಕಾಲೇಜಿನ ಕು. ಎಸ್. ಜಯಲಕ್ಷ್ಮಿ, ವಾಣಿಜ್ಯ ವಿಭಾಗದಲ್ಲಿ ದೇವಲಾಪುರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಶ್ರೀ ಎಂ. ಅಭಿಷೇಕ್, ಮಾಲೂರು ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಕು. ವಿ. ಸಿಂಧು ಹಾಗೂ ವಿಜ್ಞಾನ ವಿಭಾಗದಲ್ಲಿ ಸಕಲೇಶಪುರದ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನ ಕು. ಪಿ.ಎ. ನವ್ಯಶ್ರೀರವರು ಪ್ರತಿಭಾ ಪುರಸ್ಕಾರಕ್ಕೆ ಭಾಜನರಾದರು.

ಪ್ರಸಾದ ದ್ವೈಮಾಸಿಕ ಲೇಖನ ಸ್ಪರ್ಧೆಯ ವಿಜೇತ ವಿದ್ಯಾರ್ಥಿಗಳು ಮತ್ತು ವಾರ್ಷಿಕ ಸಂಚಿಕೆಗಳ ಬಹುಮಾನಿತ ಸಂಸ್ಥೆಗಳ ಪಟ್ಟಿಯನ್ನು ಪ್ರಕಟಣ ವಿಭಾಗದ ಗೌರವ ಸಂಪಾದಕರಾದ ಶ್ರೀ ಆರ್.ಎಸ್. ಪೂರ್ಣಾನಂದರವರು ಪ್ರಕಟಿಸಿದರು. ಪ್ರತಿಭಾ ಪುರಸ್ಕೃತ ವಿದ್ಯಾರ್ಥಿಗಳ ಪಟ್ಟಿಯನ್ನು ಸಹಾಯಕ ಪ್ರಾಧ್ಯಾಪಕರಾದ ಡಾ. ಎನ್. ಮಹೇಶ್ವರಿಯವರು, ಹಿರಿಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಂ.ಎಂ. ಸ್ವಾಮಿರವರು ಓದಿದರು. ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಸ್ವಾಗತಿಸಿದರು. ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪಿ. ಶಿವಾನಂದ ಭಾರತಿಯವರು ವಂದಿಸಿದರು. ಜೆಎಸ್‌ಎಸ್ ಕಾನೂನು ಕಾಲೇಜಿನ ಪ್ರಾಂಶುಪಾಲರಾದ ಡಾ. ಎಸ್. ನಟರಾಜುರವರು ನಿರೂಪಿಸಿದರು. ಜೆಎಸ್‌ಎಸ್ ಲಲಿತ ಕಲಾವೃಂದದವರು ಗಾಯನ ನಡೆಸುವುದರ ಜೊತೆಗೆ ಪ್ರಾರ್ಥನೆ ಸಲ್ಲಿಸಿದರು.

## ಶ್ರದ್ಧೆ ಮತ್ತು ನಿಷ್ಠೆಯಿಂದ ಕರ್ತವ್ಯ ನಿರ್ವಹಿಸಬೇಕು



ಧಾರವಾಡದ ಕೆಲಗೇರಿಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗೀಯ ಕಚೇರಿಯ ಆಡಳಿತಾಧಿಕಾರಿಗಳಾಗಿ ಸೇವೆ ಸಲ್ಲಿಸಿದ ಶ್ರೀ ಎಂ.ಪಿ. ಬಗಲಿಯವರನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಅಭಿನಂದಿಸಲಾಯಿತು. ಶ್ರೀಮತಿ ಲಿಲಿಯನ್ ಅಂತೋನಿ ಶಾನ್, ಶ್ರೀಮತಿ ಪಾರ್ವತಿ ಹಾಲಭಾವಿ, ಶ್ರೀ ಮಹೇಂದ್ರ ಪಟೇಲ್, ಶ್ರೀ ಜಿ.ಸಿ. ತಲ್ಲೂರು, ನೂತನ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಜಿ. ಬಿರಾದಾರ್, ಶ್ರೀ ಸುರೇಶ್ ಹಾಲಭಾವಿ, ಶ್ರೀ ಬಿ.ಎಂ. ಪಾಟೀಲ್ ಮತ್ತು ಶ್ರೀ ಲಿಂಗರಾಜ ಸರ್ದೇಸಾಯಿಯವರುಗಳಿದ್ದಾರೆ (29 ಏಪ್ರಿಲ್ 2022)

ಪ್ರತಿಯೊಬ್ಬರೂ ಅವರಿಗೆ ವಹಿಸಿದ ಹೊಣೆಗಾರಿಕೆಗಳನ್ನು ಶ್ರದ್ಧೆ ಮತ್ತು ನಿಷ್ಠೆಯಿಂದ ನಿರ್ವಹಿಸಬೇಕು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಧಾರವಾಡದ ಕೆಲಗೇರಿಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಆವರಣದಲ್ಲಿ ದಿನಾಂಕ 29.4.2022ರಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ಧಾರವಾಡ ವಿಭಾಗೀಯ ಕಚೇರಿಯ ಆಡಳಿತಾಧಿಕಾರಿಗಳಾಗಿದ್ದ ಶ್ರೀ ಎಂ.ಪಿ. ಬಗಲಿಯವರಿಗೆ ಅಭಿನಂದನೆ ಹಾಗೂ ನೂತನ ಆಡಳಿತಾಧಿಕಾರಿಗಳಾದ ಶ್ರೀ ಎಸ್.ಜಿ. ಬಿರಾದಾರ್‌ರವರ ಸ್ವಾಗತ ಕಾರ್ಯಕ್ರಮದ ದಿವ್ಯಸಾನ್ನಿಧ್ಯ ವಹಿಸಿ ಶ್ರದ್ಧೆ ಮತ್ತು ನಿಷ್ಠೆಯಿಂದ ಕಾರ್ಯನಿರ್ವಹಿಸಿದಾಗ ಸಮಾಜದಲ್ಲಿ ಸ್ಥಾನಮಾನ ಒಲಿದು ಬರುತ್ತದೆ. ಬಗಲಿ ಅವರು ಉತ್ತಮ ಆಡಳಿತದಿಂದ ಸಂಸ್ಥೆಯನ್ನು ಬೆಳೆಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ಅವರ 18 ವರ್ಷಗಳ ಸೇವಾ ಅವಧಿಯ ಕರ್ತವ್ಯಪರತೆ ಮತ್ತು ಸೇವಾ ಮನೋಭಾವ ಸ್ಮರಣೀಯ ಎಂದರು.

ಕಾರ್ಯದರ್ಶಿಗಳಾದ ಶ್ರೀ ಎಸ್.ಪಿ. ಮಂಜುನಾಥ್‌ರವರು ಧಾರವಾಡದಲ್ಲಿ ಸಂಸ್ಥೆ ಈ ಮಟ್ಟಕ್ಕೆ ಬೆಳೆಯಲು ಬಗಲಿಯವರ ಸೇವೆ ಮಹತ್ವದ್ದು. ಧಾರವಾಡದಲ್ಲಿ ಸಂಸ್ಥೆ ಯಾವುದೇ ಸಮಸ್ಯೆಗಳಿಲ್ಲದೆ ಮುಂದುವರಿದುಕೊಂಡು ಹೋಗುವಲ್ಲಿ ಶ್ರಮಿಸಿದ್ದಾರೆ ಎಂದು ತಿಳಿಸಿದರು.

ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಶ್ರೀ ಎಂ.ಪಿ. ಬಗಲಿಯವರು 84 ವರ್ಷ ವಯಸ್ಸಾದರೂ ಕರ್ತವ್ಯವನ್ನು ಉತ್ಸಾಹ, ಹುಮ್ಮಸ್ಸು, ತಾಳ್ಮೆಯಿಂದ ನಿರ್ವಹಿಸಿದ್ದಾರೆ. ಅವರಲ್ಲಿರುವ ತಾಳ್ಮೆಯನ್ನು ನಾವು ಮಾದರಿಯಾಗಿ ತೆಗೆದುಕೊಳ್ಳಬೇಕು ಎಂದು ಹೇಳಿದರು.

ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಮಹೇಶ್, ಜೆಎಸ್‌ಎಸ್ ಹಾಲಭಾವಿ ಸ್ಕೂಲ್ ಆಫ್ ಆರ್ಟ್ಸ್ ಕಾಲೇಜಿನ ಪ್ರಾಂಶುಪಾಲರಾದ ಡಾ. ಶ್ರೀ ಬಿ.ಎಂ. ಪಾಟೀಲ್, ವಾಕ್ ಮತ್ತು ಶ್ರವಣ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಶಬರೀಶ್, ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಶ್ರೀಮತಿ ಲಿಲಿಯನ್ ಅಂತೋನಿ ಶಾನ್, ಸಹಾಯಕ ಆಡಳಿತಾಧಿಕಾರಿಗಳಾದ ಶ್ರೀ ಮಹೇಂದ್ರ ಪಟೇಲ್, ಕಟ್ಟಡ ನಿರ್ಮಾಣ ಸಮಿತಿಯ ಅಧ್ಯಕ್ಷರಾದ ಶ್ರೀ ಜಿ.ಸಿ. ತಲ್ಲೂರುರವರು ಶ್ರೀ ಎಂ.ಪಿ. ಬಗಲಿ ಅವರೊಂದಿಗಿನ ಒಡನಾಟದ ಕುರಿತು ಮಾತನಾಡಿದರು. ಶ್ರೀ ಪ್ರಕಾಶ್ ಎಸ್. ಅಂಗಡಿಯವರು ಬಗಲಿಯವರ ಪರಿಚಯವನ್ನು ಮಾಡಿದರು. ಕು. ಶ್ರೇಯಾ ಮತ್ತು ತಂಡದವರು ಪ್ರಾರ್ಥಿಸಿದರು. ಶ್ರೀಮತಿ ಶ್ವೇತಾ ಪಾಟೀಲ್ ಸ್ವಾಗತಿಸಿದರು. ಶ್ರೀ ಡಿ. ದರ್ಶನ ವಂದಿಸಿದರು. ಶ್ರೀ ಡಿ.ಜಿ. ರಾಜಶೇಖರಪ್ಪಗೌಡ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಮಹಿಳಾ ಕಾಲೇಜಿನ 13ನೇ ಪದವೀಧರರ ದಿನಾಚರಣೆ

ಜೆಎಸ್‌ಎಸ್ ಮಹಿಳಾ ಕಾಲೇಜಿನ 13ನೇ ಪದವೀಧರ ದಿನಾಚರಣೆಯು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ದಿನಾಂಕ 30.4.2022ರಂದು ನೆರವೇರಿತು.

ಕೇಂದ್ರ ಸರ್ಕಾರದ ಶಿಕ್ಷಣ ಮತ್ತು ವಿದೇಶಾಂಗ ಇಲಾಖೆ ರಾಜ್ಯ ಖಾತೆ ಸಚಿವರಾದ ಸನ್ಮಾನ್ಯ ಡಾ. ರಾಜ್‌ಕುಮಾರ್ ರಂಜನ್ ಸಿಂಗ್‌ರವರು ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡಿ ಮೈಸೂರಿನ ಜೆಎಸ್‌ಎಸ್ ಮಹಿಳಾ ಕಾಲೇಜು ಭಾರತದ ಖಾಸಗಿ ಸ್ವಾಯತ್ತ ಕಾಲೇಜುಗಳ ಸಮೀಕ್ಷೆಯ ಪ್ರಕಾರ ರಾಜ್ಯಮಟ್ಟದಲ್ಲಿ 5ನೇ ರ್‍ಯಾಂಕ್ ಮತ್ತು ರಾಷ್ಟ್ರಮಟ್ಟದಲ್ಲಿ 25ನೇ ರ್‍ಯಾಂಕ್ ಪಡೆದು ಹೆಗ್ಗಳಿಕೆಗೆ ಪಾತ್ರವಾಗಿದೆ. ಈ ಉನ್ನತಿಗೆ ಕಾರಣರಾದ ಆಡಳಿತ ಮಂಡಳಿ, ಪ್ರಾಂಶುಪಾಲರು, ಅಧ್ಯಾಪಕ ವೃಂದ ಮತ್ತು ವಿದ್ಯಾರ್ಥಿಗಳನ್ನು ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಸಮಾಜದ ಮೂಲ ಉದ್ದೇಶವಾದ ಜ್ಞಾನಗಳಿಕೆ ಮತ್ತು ಪ್ರಸರಣಕ್ಕೆ ಮುಖ್ಯವಾಗಿ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಜೊತೆ ಜೊತೆಯಲ್ಲಿ ಕಾರ್ಯನಿರ್ವಹಿಸಬೇಕು. ಶೈಕ್ಷಣಿಕ ಸಾಧನೆಯಿಂದಲೇ ಮಹಿಳೆಯರ ಸಬಲೀಕರಣ ಎಂಬ ಕಾಲೇಜಿನ ಧ್ಯೇಯವಾಕ್ಯ ಆದರ್ಶನೀಯವಾಗಿದೆ. ಭಾರತೀಯ ಸಂಸ್ಕೃತಿಯ ಸಾರವನ್ನು ಅವನತಿಗೊಳಿಸುವಂತಹ ಯಾವುದೇ ಚಟುವಟಿಕೆಗಳಲ್ಲಿ ಭಾಗಿಯಾಗಬಾರದು. ಸಂಸ್ಕೃತಿಯ ಪರಿಕಲ್ಪನೆಯಲ್ಲಿ ಬರುವ ಜ್ಞಾನ, ಕಲೆ, ನೀತಿ ನಿಯಮ, ನಂಬಿಕೆಗಳು ಮುಂತಾದ ಅಸಂಖ್ಯಾತ ವಿಷಯಗಳು ಒಂದು ಪೀಳಿಗೆಯಿಂದ ಮತ್ತೊಂದು ಪೀಳಿಗೆಗೆ ಮುಂದುವರೆಯುವ ಅಗತ್ಯವಿದೆ. ವಸುದೈವ ಕುಟುಂಬಕಂ ಮತ್ತು ಅಹಂ ಬ್ರಹ್ಮಾಸ್ಮಿ ಎಂಬ ವಿಚಾರಧಾರೆಯ ಮೂಲ ಉದ್ದೇಶಗಳನ್ನು ಅರ್ಥ ಮಾಡಿಕೊಂಡಲ್ಲಿ ಸಾಮಾಜಿಕವಾಗಿ ಮತ್ತು ವೈಯಕ್ತಿಕವಾಗಿ ಸ್ವಾಸ್ಥ್ಯ ಸಾಧ್ಯ. ನೂತನ ಪದವೀಧರರಿಗೆ ಉಜ್ವಲ ಭವಿಷ್ಯ ದೊರೆಯಲಿ ಎಂದು ಹಾರೈಸಿದರು.

ಹೆಚ್ಚು ಅಂಕ ಪಡೆದು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದವರಿಗೆ ಮಣಿಪುರ ರಾಜ್ಯದ ಇಂಫಾಲ ಮಾಡ್ರನ್ ಕಾಲೇಜಿನ ಭೂಗೋಳಶಾಸ್ತ್ರ ವಿಭಾಗದ ಪ್ರಾಧ್ಯಾಪಕರು ಹಾಗೂ ಡಾ. ರಾಜ್‌ಕುಮಾರ್ ರಂಜನ್ ಸಿಂಗ್‌ರವರ ಶ್ರೀಮತಿಯವರಾದ ಪ್ರೊ. ದೇಬಲ ದೇವಿಯವರು ಪ್ರಶಸ್ತಿ ಪತ್ರ ಮತ್ತು ಪದಕಗಳನ್ನು ಪ್ರದಾನ ಮಾಡಿದರು.

2019–20ನೇ ಸಾಲಿನ ಒಟ್ಟು 670 ವಿದ್ಯಾರ್ಥಿನಿಯರು ಪದವಿಯನ್ನು ಪಡೆದರು. ಪದವಿ ಕೋರ್ಸುಗಳಲ್ಲಿ ಒಟ್ಟು 557 ವಿದ್ಯಾರ್ಥಿನಿಯರಲ್ಲಿ 331 ವಿದ್ಯಾರ್ಥಿನಿಯರು ಉನ್ನತ ದರ್ಜೆ, 185 ವಿದ್ಯಾರ್ಥಿನಿಯರು ಪ್ರಥಮ ದರ್ಜೆ, 38 ವಿದ್ಯಾರ್ಥಿನಿಯರು ದ್ವಿತೀಯ ದರ್ಜೆಯನ್ನು ಪಡೆದಿರುವರು. ಸ್ನಾತಕೋತ್ತರ ಪದವಿ ಕೋರ್ಸುಗಳಲ್ಲಿ ಒಟ್ಟು 113 ವಿದ್ಯಾರ್ಥಿನಿಯರಲ್ಲಿ 17 ವಿದ್ಯಾರ್ಥಿನಿಯರು ಉನ್ನತ ದರ್ಜೆ, 96 ವಿದ್ಯಾರ್ಥಿನಿಯರು ಪ್ರಥಮ ದರ್ಜೆಯನ್ನು ಪಡೆದಿರುವರು.

ಕಲಾ ವಿಭಾಗದಲ್ಲಿ ಕು. ಆರ್. ಕುಸುಮಿತ, ವಿಜ್ಞಾನ ವಿಭಾಗದಲ್ಲಿ ಕು. ಎಸ್. ಸಹನಾ, ವಾಣಿಜ್ಯ ವಿಭಾಗದಲ್ಲಿ ಕು. ಕೆ.ಆರ್. ಐಶ್ವರ್ಯ, ವ್ಯವಹಾರ ನಿರ್ವಹಣ

ವಿಭಾಗದಲ್ಲಿ ಕು. ಮೇಘನಾ ಎಸ್. ನಾಯಕ್, ಗಣಕ ವಿಜ್ಞಾನ ವಿಭಾಗದಲ್ಲಿ ಕು. ಎನ್. ದೀಪಿಕಾ, ಎಂಎ ಅರ್ಥಶಾಸ್ತ್ರದಲ್ಲಿ ಕು. ವಿ.ಎಂ. ನೀಲಮ್ಮ, ಎಂಕಾಂನಲ್ಲಿ ಕು. ಕೆ.ಎ. ಅನುಷಾ, ಎಂಎಸ್ಸಿ ರಸಾಯನಶಾಸ್ತ್ರದಲ್ಲಿ ಕು. ಎಸ್. ಮಮತಾ ಮೊದಲಿಗರಾಗಿ ಪದವಿ ಪುರಸ್ಕಾರ ಪಡೆದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠ ಅವರು ವಿದ್ಯಾರ್ಥಿನಿಯರಿಗೆ ಪ್ರತಿಜ್ಞಾವಿಧಿ ಬೋಧಿಸಿದರು. ಅವರು ಸ್ವತಃ ಚಿತ್ರಿಸಿದ ಅರ್ಥಶಾಸ್ತ್ರಜ್ಞರ ಚಿತ್ರಪಟವನ್ನು ಕಾಲೇಜಿಗೆ ಕೊಡುಗೆಯಾಗಿ ನೀಡಿದರು, ಹಾಗೂ ಅರ್ಥಶಾಸ್ತ್ರ ವಿಷಯದಲ್ಲಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿನಿಯರಿಗೆ ಬಹುಮಾನವನ್ನು ಪ್ರಾಯೋಜಿಸಿದರು.

ಶಾಸಕರಾದ ಶ್ರೀ ಎಲ್. ನಾಗೇಂದ್ರ, ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನ, ಸಹಾಯಕ ನಿರ್ದೇಶಕರಾದ ಶ್ರೀ ಬಿ. ನಿರಂಜನಮೂರ್ತಿ, ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ, ಪರೀಕ್ಷಾ ನಿಯಂತ್ರಣಾಧಿಕಾರಿಗಳಾದ ಶ್ರೀ ಎಂ.ಎಂ. ಸ್ವಾಮಿ, ಕಾಲೇಜಿನ ನಿವೃತ್ತ ಪ್ರಾಂಶುಪಾಲರುಗಳು, ಕಾಲೇಜಿನ ಬೋಧಕ–ಬೋಧಕೇತರ ವರ್ಗ, ಪೋಷಕರು, ನೂತನ ಪದವೀಧರರು ಹಾಗೂ ವಿದ್ಯಾರ್ಥಿನಿಯರು ಪಾಲ್ಗೊಂಡಿದ್ದರು.

ಶ್ರೀಮತಿ ರೂಪಾ ರವೀಶ್ ಮತ್ತು ಶ್ರೀಮತಿ ಕೆ.ಜಿ. ವಿನುತಾ ಪ್ರಾರ್ಥಿಸಿದರು. ಡಾ. ಎಚ್.ಬಿ. ಸುರೇಶ್ ಸ್ವಾಗತಿಸಿದರು. ಶ್ರೀ ಆರ್.ಎಸ್. ಕುಮಾರ್ ವಂದಿಸಿದರು. ಶ್ರೀಮತಿ ಬಿ.ಎಂ. ಉಮಾದೇವಿ ಅವರು ನಿರೂಪಿಸಿದರು.

## ಭಾರತೀಯ ಸಾಂಪ್ರದಾಯಿಕ ವೈದ್ಯಪದ್ಧತಿಗೆ ವಿಶೇಷ ಸ್ಥಾನವಿದೆ

ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಪುರಾತನ ವೈದ್ಯಕೀಯ ಪದ್ಧತಿಯ ಪಾತ್ರ ಮಹತ್ವದ್ದು ಎಂದು ಪರಮಪೂಜ್ಯ ಜಗದ್ಗುರುಗಳವರು ಹೇಳಿದರು.

ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನಲ್ಲಿ ದಿನಾಂಕ 22.4.2022ರಂದು ಎಸ್‌ಎಫ್‌ಇ ಮೈಸೂರು ಛಾಪ್ಟರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಮತ್ತು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ವತಿಯಿಂದ ಆಯೋಜಿಸಿದ್ದ ಭಾರತೀಯ ಸಾಂಪ್ರದಾಯಿಕ ಔಷಧಶಾಸ್ತ್ರ ಸಂಘದ 9ನೇ ಅಂತಾರಾಷ್ಟ್ರೀಯ ಸಮಾವೇಶದ ದಿವ್ಯಸಾನ್ನಿಧ್ಯ ವಹಿಸಿ ಇಂತಹ ಅಂತಾರಾಷ್ಟ್ರೀಯ ಸಮ್ಮೇಳನಗಳ ಆಯೋಜನೆಯಿಂದ ಶೈಕ್ಷಣಿಕವಾಗಿ ಹಾಗೂ ಸಾಮಾಜಿಕವಾಗಿ ಉತ್ತಮ ಕೊಡುಕೊಳ್ಳುವಿಕೆ ಸಾಧ್ಯ. ಬಹಳ ಮಹತ್ವದ್ದು. ಈ ಕಾರ್ಯಕ್ರಮವನ್ನು ಸರಿಯಾದ ಯೋಜನೆಯೊಂದಿಗೆ ಕಾರ್ಯಗತಗೊಳಿಸಲಾಗಿದೆ. ಭಾರತದ ಸಾಂಪ್ರದಾಯಿಕ ವೈದ್ಯಕೀಯ ಪದ್ಧತಿ ವಿಶೇಷವಾದ ಸ್ಥಾನವನ್ನು ಹೊಂದಿದೆ. ಸಮಾಜದ ಆರೋಗ್ಯ ರಕ್ಷಣೆಯಲ್ಲಿ ಸಾಂಪ್ರದಾಯಿಕ ಮೌಲ್ಯಗಳು ಮಹತ್ತರವಾಗಿವೆ ಎಂದರು.

ಇದೇ ಸಂದರ್ಭದಲ್ಲಿ ಸಮ್ಮೇಳನದ ಸ್ಮರಣ ಸಂಚಿಕೆ ಎಸ್‌ಎಫ್‌ಇಸಿ–2022 ಅನ್ನು ಪರಮಪೂಜ್ಯರು ಬಿಡುಗಡೆಗೊಳಿಸಿದರು.

ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಾದ ಡಾ. ಕೆ. ಸುಧಾಕರ್‌ರವರು ಸಾಂಪ್ರದಾಯಿಕ ಚಿಕಿತ್ಸಾ ಪದ್ಧತಿಯನ್ನು ರಕ್ಷಣೆ ಮಾಡಬೇಕಾದ ಅಂತೆಯೇ ಮುಂದಿನ ಪೀಳಿಗೆಗೆ ರವಾನಿಸಬೇಕಾದ ಅಗತ್ಯವಿದೆ. ಇದರ ಬಗ್ಗೆ ಜ್ಞಾನ ಹೊಂದಿರುವವರನ್ನು ಪ್ರೋತ್ಸಾಹಿಸಬೇಕು. ಹಿರಿಯ ತಲೆಮಾರಿನಿಂದ ಪಡೆದ ಔಷಧೀಯ ಕುಶಲತೆಗಳನ್ನು ಭವಿಷ್ಯದ ಪೀಳಿಗೆಗೆ ತಿಳಿಸಿಕೊಡಬೇಕು. ಪ್ರತಿಯೊಂದು ನೈಸರ್ಗಿಕ ಉತ್ಪನ್ನಗಳು ಔಷಧೀಯ ಗುಣಗಳನ್ನು ಹೊಂದಿವೆ ಎಂದು ತಿಳಿಸಿದರು.

ಛತ್ತೀಸ್‌ಗಡದ ಮಾಜಿ ರಾಜ್ಯಪಾಲರಾದ ಶ್ರೀ ಶೇಖರ್ ದತ್ ಅಧ್ಯಕ್ಷತೆ ವಹಿಸಿದ್ದರು. ಎಸ್‌ಎಫ್‌ಇ ಉಪಾಧ್ಯಕ್ಷರಾದ ಡಾ. ಸಿ.ಕೆ. ಕಟಿಯಾರ್, ಕುಲಸಚಿವರಾದ ಡಾ. ಬಿ. ಮಂಜುನಾಥ್, ಡಾ. ಸುಭಾಷ್ ಸಿ. ಮಂಡಲ್ ಉಪಸ್ಥಿತರಿದ್ದರು. ಕು. ಅರುಣಿಮಾ ಮತ್ತು ತಂಡದವರು ಪ್ರಾರ್ಥಿಸಿದರು. ಪ್ರೊ. ಪುಲೋಕ್ ಕೆ. ಮುಖರ್ಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಡಾ. ಟಿ.ಎಂ. ಪ್ರಮೋದ್‌ಕುಮಾರ್ ಸ್ವಾಗತಿಸಿದರು. ಡಾ. ಕೆ. ಮೃತ್ಯುಂಜಯ ವಂದಿಸಿದರು.

## ಸುತ್ತೂರು ಶ್ರೀಕ್ಷೇತ್ರದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ

ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಯುಗಾದಿ, ಅಲ್ಲಮಪ್ರಭು ಜಯಂತಿ ಹಾಗೂ ಪಂಚಾಂಗ ಶ್ರವಣ ಕಾರ್ಯಕ್ರಮಗಳು ದಿನಾಂಕ 2.4.2022 ರಂದು ಜರುಗಿದವು.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ ನಿವೃತ್ತ ಮುಖ್ಯ ಅಭಿಯಂತರರಾದ ಶ್ರೀ ಶಂಕರ್ ದೇವನೂರುರವರು ಮಾತನಾಡಿ ಅಲ್ಲಮಪ್ರಭುಗಳು ಸತ್ಯದ ಸಾಕ್ಷಾತ್ಕಾರದ ಆದಿ ಅಂತ್ಯವಿಲ್ಲದ ಅನಂತದ ಪ್ರತೀಕ. ಅವರ ವಚನಗಳು ಅಷ್ಟು ಸುಲಭವಾಗಿ ಅರ್ಥವಾಗುವಂತಹವುಗಳಲ್ಲ. ಶರಣರು ದಯೆ ಕಾರುಣ್ಯದ ಮೂಲಕ ಲೋಕವನ್ನು ಬೆಳಗಿದವರು. ಅಂತೆಯೇ ಸುತ್ತೂರು ಶ್ರೀಮಠದ ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಕಾರುಣ್ಯಮೂರ್ತಿಗಳಾಗಿ ಜಗದ ಬೆಳಕಾದರು ಎಂದು ಬಣ್ಣಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಪ್ರಾಚ್ಯವಿದ್ಯಾ ಸಂಶೋಧನಾಲಯದ ನಿವೃತ್ತ ನಿರ್ದೇಶಕರಾದ ಡಾ. ಎಸ್. ಶಿವರಾಜಪ್ಪನವರು ಸುತ್ತೂರು ಶ್ರೀಮಠವು ಸರ್ವ ಧರ್ಮಗಳ ಸಮನ್ವಯ ತಾಣ. ಸರ್ವರ ಹಿತಕಾಯುವ ಸರ್ವಜನಾಂಗದ ಶಾಂತಿಯ ತೋಟ. ಶರಣರ ವಿಶಿಷ್ಟ ಗುಣವೆಂದರೆ ಆಸೆಗೆ ದಾಸರಾಗದಿರುವುದು. 12ನೇ ಶತಮಾನದ ಶರಣ ಚಳುವಳಿಯಿಂದಾಗಿ ಮೌಢ್ಯತೆ, ಅಂಧ ಶ್ರದ್ಧೆಗಳು ಕಡಿಮೆಯಾಗಿವೆ. ವ್ಯಕ್ತಿ ಕಲ್ಯಾಣ ಮತ್ತು ಲೋಕ ಕಲ್ಯಾಣ ಶರಣರ ಬದುಕಿನ ಆಶಯವಾಗಿತ್ತು. ಅವರು ಸಮಾಜಮುಖಿಗಳು. ಆದ್ದರಿಂದಲೇ ಶರಣರ ಚಿಂತನೆಗಳು ಸಾರ್ವಕಾಲಿಕವಾಗಿವೆ. ಶರಣರು ಜೀವನ ಕಲೆಯ ಮಹಾಶಿಲ್ಪಿಗಳು. ಅನುಭಾವದ ನುಡಿಗಳನ್ನು ನೀಡಿದ ಕಾಲಜ್ಞಾನಿಗಳು. ಅಲ್ಲಮಪ್ರಭುಗಳು ಅನುಭವದ ಮಹಾಮೇರು. ಅವರ ಬೆಡಗಿನ ವಚನಗಳಲ್ಲಿ ಜೀವನ, ಭಕ್ತಿ, ಸಾಂಸಾರಿಕ ಜಂಜಾಟ ಇವೇ ಮೊದಲಾದ ವಿಷಯಗಳು ಅನಾವರಣಗೊಂಡಿವೆ ಎಂದು ತಿಳಿಸಿದರು.

ಭಾರತೀಯ ಜ್ಯೋತಿರ್ವಿಜ್ಞಾನ ಸಂಶೋಧನಾ ಕೇಂದ್ರದ ಅಧ್ಯಕ್ಷರು ಹಾಗೂ ಪಂಚಾಂಗ ಕರ್ತರಾದ ಸಿದ್ಧಾಂತಿ ಡಾ. ಕೆ.ಜಿ. ಪುಟ್ಟಹೊನ್ನಯ್ಯನವರು ಸುತ್ತೂರು ಶ್ರೀ ಶಿವರಾತ್ರೀಶ್ವರ ಪಂಚಾಂಗದಲ್ಲಿ ರಾಷ್ಟ್ರೀಯ ಪಂಚಾಂಗದ ವಿವರಗಳು ಇವೆ. ವರ್ಷ ಪ್ರವೇಶ ಕುಂಡಲಿಯಂತೆ ಮಳೆ ನಕ್ಷತ್ರಗಳ ಬಗ್ಗೆ ಪೂರ್ಣ ಮಾಹಿತಿಯಿದೆ. ಬಹುತೇಕ ಮಳೆಗಳು ಬುಧವಾರದಂದೇ ಆರಂಭವಾಗುತ್ತವೆ. ಸದರೀ ವರ್ಷ ವೃಷ್ಟಿ ಯೋಗ ಚೆನ್ನಾಗಿದೆ. ಈ ಪಂಚಾಂಗದಿಂದ ನಮ್ಮ ಜ್ಞಾನವನ್ನು ಅಧಿಕಗೊಳಿಸಿಕೊಳ್ಳಬಹುದಾಗಿದೆ. ನಮ್ಮೆಲ್ಲರಿಗೂ ಪಂಚಾಂಗದ ಅಗತ್ಯವಿದೆ. ಹೇಗೆ ಬದುಕಬೇಕು, ಸಂಸ್ಕಾರಗಳನ್ನು ಹೇಗೆ ಕಲಿಯಬೇಕು, ಆಚರಣೆಗಳನ್ನು ಹೇಗೆ ಮಾಡಬೇಕು ಇತ್ಯಾದಿಗಳನ್ನು ಪಂಚಾಂಗದಿಂದ ಪಡೆದುಕೊಳ್ಳುವುದು ಸಾಧ್ಯ. ಹಿರಿಯರಿಗೆ, ಗೃಹಸ್ಥರಿಗೆ ಹಾಗೂ ದೇವಾಲಯಗಳಲ್ಲಿ ಪೂಜಾ ಕಾರ್ಯಗಳನ್ನು ಮಾಡುವವರಿಗೆಲ್ಲ ಪಂಚಾಂಗ ಅತ್ಯಾವಶ್ಯಕವಾಗಿದೆ ಎಂದು ತಿಳಿಸಿದರು.

ಮೈಸೂರು ವಿಶ್ವವಿದ್ಯಾನಿಲಯದ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ಹಾಗೂ ಪ್ರಸಾರಾಂಗದ ನಿವೃತ್ತ ನಿರ್ದೇಶಕರಾದ ಪ್ರೊ. ನೀಲಗಿರಿ ಎನ್. ತಳವಾರ್‌ರವರು ಶಿವಶರಣರನ್ನು ನೆನಪು ಮಾಡಿಕೊಳ್ಳುವುದೇ ಒಂದು ಯೋಗ. ಸುತ್ತೂರು ಶ್ರೀಮಠದಿಂದ ಶರಣ ಸಾಹಿತ್ಯದ ಹಲವಾರು ಅಮೂಲ್ಯ ಕೃತಿಗಳನ್ನು ಹೊರತರಲಾಗಿದೆ. ಅವುಗಳನ್ನು ಅಧ್ಯಯನ ಮಾಡುವ ಮೂಲಕ ಬದುಕನ್ನು ಸಾರ್ಥಕಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಶ್ರೀಮಠ ಹಾಗೂ ಗ್ರಾಮದ ಹೊನ್ನೇರುಗಳು ಶ್ರೀಮಠದಿಂದ ಮಂಗಳವಾದ್ಯ ಹಾಗೂ ವಿವಿಧ ಜನಪದ ಕಲಾ ತಂಡಗಳೊಂದಿಗೆ ಮೆರವಣಿಗೆಯಲ್ಲಿ ಹೊರಟು ಜಮೀನುಗಳಿಗೆ ತೆರಳಿ ಭೂಮಿತಾಯಿಗೆ ಪೂಜೆ ಸಲ್ಲಿಸಿ ಹೊಸ ವರ್ಷದ ಕೃಷಿಕಾಯಕಕ್ಕೆ ಚಾಲನೆ ನೀಡಲಾಯಿತು. ಕರ್ತೃಗದ್ದುಗೆ ಹಾಗೂ ಶ್ರೀಕ್ಷೇತ್ರದ ಎಲ್ಲಾ ದೇವಸ್ಥಾನಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು. ಇದೇ ಸಂದರ್ಭದಲ್ಲಿ 30ಕ್ಕೂ ಹೆಚ್ಚು ವಟುಗಳು ದೀಕ್ಷಾಸಂಸ್ಕಾರ ಪಡೆದರು.

ಕುದೇರುಮಠ, ಮಾಡ್ರಹಳ್ಳಿ, ವೀರಪ್ಪ ಒಡೆಯರ ಹುಂಡಿ, ಕುಂದೂರು ಬೆಟ್ಟ, ಹಂಚೀಪುರ, ಮಡಿವಾಳಸ್ವಾಮಿ ಮಠಗಳ ಶ್ರೀಗಳು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ

ಅಧ್ಯಕ್ಷರಾದ ಶ್ರೀ ಮಲೆಯೂರು ಗುರುಸ್ವಾಮಿ, ಕೋಲಾರದ ಮಾಜಿ ಶಾಸಕರಾದ ಶ್ರೀ ಕೃಷ್ಣ ಮೊದಲಾದವರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಕಾರ್ಯಕ್ರಮಕ್ಕೆ ಮೊದಲು ಸುತ್ತೂರು ಉಚಿತ ಶಾಲೆಯ ಸಂಗೀತ ಶಿಕ್ಷಕರು ಹಾಗೂ ವಿದ್ಯಾರ್ಥಿಗಳು ಗಾಯನ ನಡೆಸಿಕೊಟ್ಟರು. ಶ್ರೀಮತಿ ಎನ್. ಚೂಡಾಮಣಿ ಪ್ರಾರ್ಥನೆ ಸಲ್ಲಿಸಿದರು. ಶ್ರೀ ಜಿ.ಎಲ್. ತ್ರಿಪುರಾಂತಕ ಅತಿಥಿಗಳನ್ನು ಪರಿಚಯಿಸಿದರು. ಶ್ರೀ ಪಂಚಾಕ್ಷರಿ ವಂದಿಸಿದರು. ಶ್ರೀ ಅಂದಯ್ಯ ಶಿರೂರಮಠ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು.

## ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯಕ್ಕೆ ಅರ್ಜಿ ಆಹ್ವಾನ

ಮೈಸೂರಿನ ಬೋಗಾದಿ ಎರಡನೆಯ ಹಂತದಲ್ಲಿರುವ **ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯಕ್ಕೆ** 2022–23ನೇ ಸಾಲಿಗೆ ಪ್ರವೇಶ ಪಡೆಯಲಿಚ್ಛಿಸುವ ಅರ್ಹ ವಿದ್ಯಾಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

5 ರಿಂದ 8ನೇ ತರಗತಿವರೆಗೆ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶವಿರುತ್ತದೆ. ಅರ್ಜಿಯನ್ನು ಜೆಎಸ್‌ಎಸ್ ಮಕ್ಕಳ ವಿದ್ಯಾರ್ಥಿನಿಲಯ ಬೋಗಾದಿ ಎರಡನೇ ಹಂತ, 1ನೇ ಮೇನ್, 1ನೇ ಕ್ರಾಸ್, ಮೈಸೂರು–570026 ಇಲ್ಲಿ ಪಡೆಯಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ವ್ಯವಸ್ಥಾಪಕರಾದ ಶ್ರೀ ಕೆ.ಎಸ್. ಗೌರಿಶಂಕರಸ್ವಾಮಿ ಅಥವಾ ಶ್ರೀ ಕೆ.ಎಸ್. ಕುಮಾರಸ್ವಾಮಿ ಯವರುಗಳನ್ನು ಕ್ರಮವಾಗಿ ಮೊ.9741452271 ಮತ್ತು ಮೊ.9972014655 ಈ ದೂರವಾಣಿಗಳಲ್ಲಿ ಸಂಪರ್ಕಿಸಬಹುದಾಗಿದೆ.

## ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಗೆ ಬೀಳ್ಕೊಡುಗೆ ಸಮಾರಂಭ

**ಮೈಸೂರಿನ ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 1.4.2022ರಂದು ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರಿಗೆ ಪ್ರೇರಣಾ ನುಡಿ ಮತ್ತು ಬೀಳ್ಕೊಡುಗೆ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿ ವಿದ್ಯಾರ್ಥಿನಿಯರು ವಿದ್ಯಾಭ್ಯಾಸಕ್ಕೆ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿ ತಮ್ಮ ಗುರಿಯನ್ನು ತಲುಪಬೇಕು. ಉತ್ತಮ ಭವಿಷ್ಯವನ್ನು ರೂಪಿಸಿಕೊಳ್ಳಬೇಕು. ಇತರರಿಗೆ ಪ್ರೇರಣಾತ್ಮಕ ಹಾಗೂ ಸ್ಫೂರ್ತಿದಾಯಕ ಭವಿಷ್ಯ ರೂಪಿಸಿಕೊಳ್ಳಬೇಕು ಎಂದರು.

ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ, ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಎಂ.ಪಿ. ರಾಜೇಶ್ವರಿ, ಸಾಂಸ್ಕೃತಿಕ ಮತ್ತು ಸಾಹಿತ್ಯಕ ಸಮಿತಿಯ ಸಂಚಾಲಕರಾದ ಶ್ರೀಮತಿ ಎಂ.ಎಸ್. ರಶ್ಮಿ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರಾದ ಶ್ರೀ ಎಂ. ಶಿವಕುಮಾರಸ್ವಾಮಿ ಉಪಸ್ಥಿತರಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿನಿಯರಿಗೆ ಪ್ರೊ. ಮೊರಬದ ಮಲ್ಲಿಕಾರ್ಜುನರವರು ಹಾಗೂ ಡಾ. ಕೆ.ವಿ. ಸುರೇಶರವರು ಬಹುಮಾನವನ್ನು ವಿತರಿಸಿದರು. ದ್ವಿತೀಯ ಪಿಯುಸಿ ವಿದ್ಯಾರ್ಥಿನಿಯರು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು. ಪ್ರತಿಭಾನ್ವಿತ ವಿದ್ಯಾರ್ಥಿನಿಯರಾದ ಅಂತಾರಾಷ್ಟ್ರೀಯ ನೃತ್ಯಗಾರ್ತಿ ಕು. ಎಸ್. ಸ್ನೇಹ, ಹಾಗೂ ಮಹಿಳಾ ಕ್ರಿಕೆಟ್ ಪಟುವಾದ ಕು. ಟಿ. ನಿರೀಕ್ಷಾ ತಮ್ಮ ಸಾಧನೆಯ ಬಗ್ಗೆ ಅನುಭವಗಳನ್ನು ತಿಳಿಸಿದರು. ವಿದ್ಯಾರ್ಥಿನಿಯಾದ ಕು. ಸೋನುಶ್ರೀ ಕಾರ್ಯಕ್ರಮ ನಿರೂಪಿಸಿದರು. ರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಂ.ಎಸ್. ರಶ್ಮಿರವರು ವಂದಿಸಿದರು.

# ಶಿಷ್ಯೋಪನಯನ: ಪ್ರಥಮ ವರ್ಷದ ಆಯುರ್ವೇದ ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ವಾಗತ



ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ ಪ್ರಥಮ ವರ್ಷದ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ 'ಶಿಷ್ಯೋಪನಯನ' ಸ್ವಾಗತ ಕಾರ್ಯಕ್ರಮವನ್ನು ಉದ್ಘಾಟಿಸಲಾಯಿತು. ಡಾ. ಸರ್ಬೇಶ್ವರ್‌ಕರ್, ಶ್ರೀ ಆರ್. ಮಹೇಶ್, ಡಾ. ಸಿ.ಎಸ್. ಅನಿಲ್‌ಕುಮಾರ್ ಹಾಗೂ ವಿದ್ಯಾರ್ಥಿಗಳಿದ್ದಾರೆ.

**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜಿನಲ್ಲಿ** ದಿನಾಂಕ 7.4.2022ರಂದು ಪ್ರಥಮ ವರ್ಷದ ಪದವಿ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳ 'ಶಿಷ್ಯೋಪನಯನ' ಸ್ವಾಗತ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ದೀಕ್ಷಿತ್ ಆರೋಗ್ಯಧಾಮ ಹಾಗೂ ಸಂಶೋಧನಾ ಕೇಂದ್ರದ ನಿರ್ದೇಶಕರಾದ ಡಾ. ಸಿ.ಎಸ್. ಅನಿಲ್‌ಕುಮಾರ್ ರವರು ಜೆಎಸ್‌ಎಸ್ ಶಿಕ್ಷಣ ಸಂಸ್ಥೆಗಳು ಸಮಾಜಕ್ಕೆ ಶಿಕ್ಷಣ ಕ್ಷೇತ್ರಕ್ಕೆ ನೀಡುತ್ತಿರುವ ಕೊಡುಗೆ ಅಪಾರವಾದುದು. ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆ ಕಳೆದ ಎರಡೂವರೆ ದಶಕದಲ್ಲಿ ಹಂತಹಂತವಾಗಿ ಉನ್ನತ ಸ್ಥಾನಕ್ಕೆ ಏರುತ್ತಾ ಬಂದಿದೆ. ಆಯುರ್ವೇದ ಶಾಸ್ತ್ರಕ್ಕೆ ಸಂಸ್ಥೆಯ ಕೊಡುಗೆ ಹಾಗೂ ಈ ಸಂಸ್ಥೆಯಿಂದ ಹೊರಬಂದ ಹಿರಿಯ ವಿದ್ಯಾರ್ಥಿಗಳು ಜಗತ್ತಿನಾದ್ಯಂತ ಆಯುರ್ವೇದದ ಜ್ಞಾನ ಹಾಗೂ ಸಂಸ್ಥೆಯ ಹಿರಿಮೆಯನ್ನು ಹೆಚ್ಚಿಸಿದ್ದಾರೆ. ವಿದ್ಯಾರ್ಥಿಗಳ ಗುರಿ ಜ್ಞಾನಾರ್ಜನೆಯ ಜೊತೆಗೆ ಮೌಲ್ಯ ಬೆಳವಣಿಗೆಯೂ ಆಗಿದೆ. ಗುರು ಶಿಷ್ಯ ಸಂಬಂಧ ಉತ್ತಮವಾಗಿರಬೇಕು ಹಾಗೂ ವಿದ್ಯಾರ್ಥಿಗಳಲ್ಲಿ ಸಮಾಜಮುಖಿಯಾದ ಮನಃಸ್ಥಿತಿ ಇರಬೇಕು. ಅಂತೆಯೇ ಆಯುರ್ವೇದ ಕ್ಷೇತ್ರದಲ್ಲಿ ಉಂಟಾಗಿರುವ ಸಂಶೋಧನಾತ್ಮಕ ಕೃತಿಗಳ ಹಾಗೂ ಪ್ರಯೋಗಗಳ ಕುರಿತು ಅಧ್ಯಯನಶೀಲರಾಗಬೇಕೆಂದು ಕರೆಕೊಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್‌ರವರು ಭಾರತೀಯ ಸಂಸ್ಕೃತಿಯಲ್ಲಿ ಶಿಷ್ಯೋಪನಯನ ಅತ್ಯಂತ ಮಹತ್ವವಾದುದು. ಭಾರತೀಯ ವೈದ್ಯ ಪದ್ಧತಿ ಶ್ರೇಷ್ಠವಾಗಿದೆ. ಆಯುರ್ವೇದದ ಅಧ್ಯಯನ, ಭವಿಷ್ಯದ ಜಾಗತೀಕರಣ ಹಾಗೂ ಸವಾಲುಗಳ ಬಗ್ಗೆ ಆಲೋಚಿಸಬೇಕು. ಪೋಷಕರು ತಮ್ಮ ಮಕ್ಕಳ ಆಯುರ್ವೇದ ಶಿಕ್ಷಣಕ್ಕೆ ಜೆಎಸ್‌ಎಸ್ ಆಯುರ್ವೇದ ಸಂಸ್ಥೆಯನ್ನು ಆರಿಸಿಕೊಂಡಿದ್ದಕ್ಕೆ ಧನ್ಯವಾದಗಳು. ವಿದ್ಯಾರ್ಥಿಗಳು ನಿಷ್ಠೆ, ಶ್ರದ್ಧೆ ಹಾಗೂ ಭಕ್ತಿಯಿಂದ ಅಧ್ಯಯನ ಮಾಡಿ ಪೋಷಕರಿಗೆ ಹಾಗೂ ಸಂಸ್ಥೆಗೆ ಗೌರವವನ್ನು ತಂದುಕೊಡಬೇಕೆಂದು ಹೇಳಿದರು.

ಕು. ಸ್ಪಂದನಾ ಹಾಗೂ ತಂಡದವರು ಪ್ರಾರ್ಥಿಸಿದರು. ಕಾಲೇಜಿನ ಪ್ರಾಂಶುಪಾಲರಾದ ಡಾ. ಸರ್ಬೇಶ್ವರ್‌ಕರ್ ಸ್ವಾಗತಿಸಿದರು. ಡಾ. ದೀಪಾ ಸಿ. ಪಾಟೀಲ್ ವಂದಿಸಿದರು. ಡಾ. ಸಂಧ್ಯಾರಾಣಿ ಅತಿಥಿಗಳನ್ನು ಪರಿಚಯಿಸಿದರು. ಡಾ. ಪಿ.ಪಿ. ಅಯ್ಯಣ್ಣ. ಮತ್ತು ಡಾ. ಚೈತ್ರ ಕಾರ್ಯಕ್ರಮ ನಿರೂಪಿಸಿದರು. 2021–22ನೇ ಸಾಲಿನ ಪ್ರಥಮ ವರ್ಷದ ವಿದ್ಯಾರ್ಥಿಗಳು ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು, ಪೋಷಕರು, ಎಲ್ಲಾ ಬೋಧಕ ಹಾಗೂ ಬೋಧಕೇತರ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ಜ್ಞಾನವಾರಿಧಿ

ಮೈಸೂರಿನ ಜೆಎಸ್‌ಎಸ್ ಮಹಾವಿದ್ಯಾಪೀಠದ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯಸಾನ್ನಿಧ್ಯದಲ್ಲಿ ಪ್ರತಿ ಸೋಮವಾರ ನಡೆಯುವ ಜ್ಞಾನವಾರಿಧಿ ಉಪನ್ಯಾಸದಲ್ಲಿ ಕಲೆ, ಸಾಹಿತ್ಯ, ಸಂಸ್ಕೃತಿ, ಶಿಕ್ಷಣ, ವಿಜ್ಞಾನ, ತಂತ್ರಜ್ಞಾನ, ಧರ್ಮ, ಅಧ್ಯಾತ್ಮ, ಯೋಗ, ಆರೋಗ್ಯ, ಜೀವನಶೈಲಿ ಮುಂತಾದ ವಿಷಯಗಳು ಮತ್ತು ಪ್ರಚಲಿತ ವಿದ್ಯಮಾನಗಳನ್ನು ಕುರಿತು ದೇಶ ಮತ್ತು ವಿದೇಶದ ವಿವಿಧ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸಗಳನ್ನು ಆಯೋಜಿಸಲಾಗುತ್ತಿದೆ. ಆನ್‌ಲೈನ್ ಮೂಲಕ ನಡೆಯುವ ಈ ಉಪನ್ಯಾಸ ಕಾರ್ಯಕ್ರಮವು ಸಾಕಷ್ಟು ಜನಪ್ರಿಯವಾಗಿದೆ. ಉಪನ್ಯಾಸದ ನಂತರ ವೀಕ್ಷಕರ ಆಯ್ದ ಪ್ರಶ್ನೆಗಳಿಗೆ ಉತ್ತರಿಸಲಾಗುತ್ತಿದೆ.

ಆನ್‌ಲೈನ್ ಮೂಲಕ ನಡೆಯುವ ಕಾರ್ಯಕ್ರಮದಲ್ಲಿ ಆಧ್ಯಾತ್ಮಿಕ ಜಿಜ್ಞಾಸುಗಳು, ಸಾರ್ವಜನಿಕರು ಭಾಗವಹಿಸುತ್ತಿದ್ದಾರೆ.

### ಭೌತಿಕ ಕಟ್ಟಡಕ್ಕಿಂತ ಬೌದ್ಧಿಕ ಕಟ್ಟಡ ನಿರ್ಮಿಸಬೇಕು



ಮನುಷ್ಯ ಭೌತಿಕವಾದ ಕಟ್ಟಡಗಳನ್ನು ನಿರ್ಮಿಸುವುದಕ್ಕಿಂತ ತನ್ನೊಳಗೆ ಬೌದ್ಧಿಕವಾದ ಕಟ್ಟಡವನ್ನು ನಿರ್ಮಿಸುವ ಅವಶ್ಯಕತೆ ಇದೆ ಎಂದು ಅಖಿಲ ಕರ್ನಾಟಕ ಶ್ರೀ ಭೋವಿ ಗುರುಪೀಠದ ಜಗದ್ಗುರು ಶ್ರೀ ಇಮ್ಮಡಿ ಸಿದ್ಧರಾಮೇಶ್ವರ ಸ್ವಾಮಿಗಳು ಹೇಳಿದರು.

ದಿನಾಂಕ 5.4.2022ರಂದು ನಡೆದ 'ಜ್ಞಾನವಾರಿಧಿ–70' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಸಿದ್ಧರಾಮೇಶ್ವರರ ಸಂದೇಶ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಸಿದ್ಧರಾಮೇಶ್ವರರು ಧಾರ್ಮಿಕ ಜಿಜ್ಞಾಸುಗಳು, ಆಧ್ಯಾತ್ಮಿಕ ಹಸಿವಿದ್ದ ಸದ್ಭಕ್ತರು. ಜ್ಞಾನ ಮಾರ್ಗದಲ್ಲಿ ಸಾಗುವ ಆಶಯವನ್ನು ಹೊಂದಿದ್ದವರು. ಬಸವಣ್ಣನವರು ಸ್ಥಾಪಿಸಿದ ಅನುಭವ ಮಂಟಪ ಒಂದು ಅದ್ಭುತ ಕಲ್ಪನೆ. ಅಲ್ಲಮಪ್ರಭುದೇವರು ಸಿದ್ಧರಾಮರ ಮೂಲಕ ಲೋಕಕಲ್ಯಾಣವನ್ನು ಮಾಡಿಸಿದರು. ಸಿದ್ಧರಾಮರ ವಚನಗಳಿಂದ ಮನಸ್ಸು ಪರಿವರ್ತನೆಗೆ ತೆರೆದುಕೊಳ್ಳುತ್ತದೆ. ಬಡತನದ ಬೇಗೆಯಲ್ಲಿದ್ದವರಲ್ಲಿ ಮಾತ್ರ ನಿಜವಾದ ಭಕ್ತಿ ಇರುತ್ತದೆ. ಇಂದು ದೇವರ ಜೊತೆಯೇ ಕೊಡುಕೊಳ್ಳುವಿಕೆಯ ವ್ಯವಹಾರವನ್ನು ಮಾಡಲಾಗುತ್ತಿದೆ. ಬಡವರ ಭಕ್ತಿಯನ್ನು ವೈಜ್ಞಾನಿಕತೆಗೆ ತಂದವರು ಬಸವಾದಿ ಶರಣರು. ಬಡವರ ಮುಗ್ಧತೆಯನ್ನು ಮೌಢ್ಯಕ್ಕೆ ತಳ್ಳದೆ ವೈಚಾರಿಕತೆಯ ಒರೆಗೆ ಹಚ್ಚುವ ಕೆಲಸವನ್ನು ಸಿದ್ಧರಾಮರು ಮಾಡಿದರು. ಶ್ರಮಿಕವರ್ಗದವರಿಗೂ ಜ್ಞಾನಪಡೆದುಕೊಳ್ಳುವ ಹಕ್ಕನ್ನು ಶರಣರು ನೀಡಿದರು. ಶರಣ ಸಂಕುಲ ಸ್ತ್ರೀಯರನ್ನು ಹೆಚ್ಚು ಗೌರವಿಸಿತು. ಭಕ್ತ ಭಗವಂತನಾಗಬೇಕು. ನರ ನಾರಾಯಣನಾಗಬೇಕು. ಪಾಪ ಮಾಡಿದವನನ್ನು ಪಾಪಾತ್ಮ, ಪುಣ್ಯ ಮಾಡಿದವನನ್ನು ಪುಣ್ಯಾತ್ಮ, ಗಾಂಧೀಜಿಯಂತಹ ಕೆಲಸಗಳನ್ನು ಮಾಡಿದರೆ ಮಹಾತ್ಮ, ದೇಶಕ್ಕಾಗಿ ತ್ಯಾಗ ಬಲಿದಾನ ಮಾಡಿದವರನ್ನು ಹುತಾತ್ಮ ಎನ್ನಲಾಗುತ್ತದೆ. ಸಕಲ ಜೀವಾತ್ಮರಿಗೂ ಲೇಸನ್ನೆ ಬಯಸಬೇಕು. ಸ್ವರ್ಗ ಮರ್ತ್ಯಗಳನ್ನು ನಾವಿರುವಲ್ಲಿಯೇ ಸೃಷ್ಟಿಸಿಕೊಳ್ಳಬಹುದು. ವೈಜ್ಞಾನಿಕ ಮತ್ತು ವೈಚಾರಿಕತೆಯ ಮೂಲಕ ನಮ್ಮನ್ನು ನಾವು ಪರಿವರ್ತನೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ಸುತ್ತೂರು ಶಾಲಾಮಕ್ಕಳು ಪ್ರಾರ್ಥಿಸಿದರು. ಶ್ರೀ ಬಸವರಾಜು ಕಾರ್ಯಕ್ರಮ ನಿರ್ವಹಿಸಿದರು.

## ಭಾರತೀಯ ಸಾಂಪ್ರದಾಯಿಕ ಆಚರಣೆಗಳಿಗೆ ವೈಜ್ಞಾನಿಕ ಹಿನ್ನೆಲೆಗಳಿವೆ



ಭಾರತೀಯರ ಸಾಕಷ್ಟು ಸಾಂಪ್ರದಾಯಿಕ ಆಚರಣೆಗಳಿಗೆ ವೈಜ್ಞಾನಿಕ ಹಿನ್ನೆಲೆಗಳಿವೆ ಎಂದು ಚಿಕ್ಕಮಗಳೂರಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕರಾದ ಶ್ರೀ ಟಿ. ತ್ಯಾಗರಾಜ್‌ರವರು ಹೇಳಿದರು.

ದಿನಾಂಕ 11.4.2022ರಂದು ನಡೆದ 'ಜ್ಞಾನವಾರಿಧಿ-71' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಜ್ಞಾನಕ್ಕೆ ವಿಜ್ಞಾನವೇ ಮದ್ದು ವಿಷಯ ಕುರಿತು ಉಪನ್ಯಾಸ ನೀಡುತ್ತಾ ಹಿಂದೆ ಭಾರತವನ್ನು ಹಾವಾಡಿಗರ ದೇಶವೆಂದು ವಿದೇಶಿಗರು ಹೀಯಾಳಿಸುತ್ತಿದ್ದರು. ನಮ್ಮ ಆಚರಣೆಗಳನ್ನು ಅಪಹಾಸ್ಯ ಮಾಡಲಾಗುತ್ತಿತ್ತು. ಆದರೆ ಆ ಆಚರಣೆಗಳಿಗೆ ವೈಜ್ಞಾನಿಕ ಹಿನ್ನೆಲೆಗಳಿರುವುದನ್ನು ಅವರು ಅರಿತಿರಲಿಲ್ಲ. ಬಹಳಷ್ಟು ಭಾರತೀಯರಿಗೂ ನಮ್ಮ ಆಚರಣೆಗಳ ಹಿಂದೆ ವೈಜ್ಞಾನಿಕ ಹಿನ್ನೆಲೆಗಳಿರುವುದು ಗೊತ್ತಿಲ್ಲ. ಹಿಂದಿನಿಂದ ನಡೆದುಕೊಂಡು ಬಂದ ಪದ್ಧತಿಯನ್ನು ಮುಂದುವರೆಸಿ ಕೊಂಡು ಹೋಗುತ್ತಿದ್ದೇವೆ ಎಂದು ಹೇಳುತ್ತಾರೆ. ಭಾರತೀಯರು ವರ್ಷದ ಒಂದೊಂದು ಕಾಲದಲ್ಲಿ ಆಚರಿಸುವ ಹಬ್ಬಗಳಿಗೂ ಒಂದಲ್ಲಾ ಒಂದು ವೈಜ್ಞಾನಿಕ ಹಿನ್ನೆಲೆಯಿದೆ. ಪ್ರಕೃತಿಯೆಲ್ಲ ಹಸಿರಿನಿಂದ ಮೈದುಂಬಿ ನಿಂತಾಗ ಯುಗಾದಿ ಹಬ್ಬವನ್ನು ಆಚರಿಸುತ್ತೇವೆ. ಬೇವು-ಬೆಲ್ಲ ತಿಂದು ಸುಖ-ದುಃಖಗಳನ್ನು ಸಮನಾಗಿ ಸ್ವೀಕರಿಸುತ್ತೇವೆ. ಸಂಕ್ರಾಂತಿ ಸಂದರ್ಭದಲ್ಲಿ ಎಳ್ಳುಬೆಲ್ಲ ತಿಂದು ಚಳಿಗಾಲದಲ್ಲಿ ಬಿರಿದಿರುವ ಚರ್ಮಕ್ಕೆ ಕಾಂತಿಯನ್ನು ನೀಡುವ ಕೆಲಸವನ್ನು ಮಾಡಲಾಗುತ್ತದೆ. ರಾಸುಗಳನ್ನು ಅವುಗಳ ದೇಹದಲ್ಲಿರುವ ಕ್ರಿಮಿಕೀಟಗಳು ಬೆಂಕಿ ಧಗೆಗೆ ಉದುರಿಹೋಗಲಿ ಎಂದು ಕಿಚ್ಚು ಹಾಯಿಸಲಾಗುತ್ತದೆ. ಇದರಿಂದ ಅವುಗಳ ದೇಹದ ರಕ್ಷಣೆಯಾಗುತ್ತದೆ. ದೇವಸ್ಥಾನಗಳ ರಥೋತ್ಸವದಿಂದ ಸಾಂಸ್ಕೃತಿಕ ವಿನಿಮಯವಾಗುತ್ತದೆ. ಜಾತ್ರೆಗಳನ್ನು ಏರ್ಪಡಿಸುವುದರಿಂದ ಎಲ್ಲ ವರ್ಗಗಳ ಜನರಿಗೂ ಆರ್ಥಿಕವಾಗಿ ಅನುಕೂಲವಾಗುತ್ತದೆ. ಭಾರತೀಯರಿಗೆ ಸಾವಿರಾರು ವರ್ಷಗಳ ಹಿಂದೆಯೇ ವೈಜ್ಞಾನಿಕ ಮನೋಭಾವವಿತ್ತು. ಭಾರತಕ್ಕಿಂತಲೂ ಇತರೆ ದೇಶಗಳಲ್ಲಿ ವಿಚಿತ್ರವಾದ ಮೂಢನಂಬಿಕೆಗಳಿವೆ. ಭಾರತೀಯರು ಆದಿಕಾಲದಿಂದಲೇ ವೈಜ್ಞಾನಿಕ ನೆಲೆಯಲ್ಲಿ ಬೆಳೆದವರು ಎಂದು ತಿಳಿಸಿದರು.

ಶ್ರೀಮತಿ ಸುಮಂಗಲ ಜಂಗಮಶೆಟ್ಟಿ ಮತ್ತು ಶ್ರೀಮತಿ ರೂಪ ಗುರುಪ್ರಸಾದ್ ಪ್ರಾರ್ಥಿಸಿದರು. ಶ್ರೀ ನಗರ್ಲೆ ಶಿವಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

## ಶ್ರಮ ಸಂಸ್ಕೃತಿಯಿಂದ ರಚಿತವಾದ ಸಾಹಿತ್ಯದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ



ಶ್ರಮ ಸಂಸ್ಕೃತಿಯಿಂದ ರಚಿತವಾದ ಸಾಹಿತ್ಯದಿಂದ ಮಾತ್ರ ಉತ್ತಮ ಸಮಾಜ ನಿರ್ಮಾಣ ಸಾಧ್ಯ ಎಂದು ಬೆಂಗಳೂರು ಶೇಷಾದ್ರಿಪುರಂ ಸಂಜೆ ಕಾಲೇಜಿನ ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ. ಸತ್ಯಮಂಗಲ ಮಹಾದೇವರವರು ತಿಳಿಸಿದರು.

ದಿನಾಂಕ 18.4.2022ರಂದು ನಡೆದ 'ಜ್ಞಾನವಾರಿಧಿ-72' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ

ಕಾವ್ಯ ಮತ್ತು ಸಂಸ್ಕೃತಿ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಸಾಹಿತ್ಯದ ಒಲುವೆ-ನಿಲುವೆಗಳು ಪ್ರಾಪ್ತವಾಗುವುದು ಶಬ್ದ ಮತ್ತು ಅರ್ಥದಿಂದ. ಶಬ್ದ ಮತ್ತು ಅರ್ಥಗಳ ಸಂಯೋಗದಿಂದಲೇ ಸಾಹಿತ್ಯ ಸೃಷ್ಟಿಯಾಗುತ್ತದೆ. ಇದರಿಂದ ಅರ್ಥಪೂರ್ಣವಾದ ಸಮಾಜ ಮತ್ತು ಸಂಸ್ಕೃತಿಯನ್ನು ಕಟ್ಟಬಹುದು. ಕವಿತ್ವ ನಿತ್ಯವೂ ಹೊಸದಾಗಿ ಕಾಣುತ್ತದೆ. ಶ್ರಮ ಸಂಸ್ಕೃತಿಯಿಂದ ರಚನೆಯಾದ ಸಾಹಿತ್ಯಕ್ಕೆ ವಚನ ಸಾಹಿತ್ಯ ಶ್ರೇಷ್ಠ ಉದಾಹರಣೆ. ವಚನ ಸಾಹಿತ್ಯ ಕನ್ನಡ ಸಾಹಿತ್ಯಕ್ಕೆ ಜಾಗತಿಕ ಮನ್ನಣೆಯನ್ನು ತಂದುಕೊಟ್ಟಿದೆ. ಜಗತ್ತಿಗೆ ನೈತಿಕತೆಯನ್ನು ನೀಡಿದ ವಚನ ಸಾಹಿತ್ಯ ಅನುಭವಜನ್ಯವಾದುದು. ಕುವೆಂಪುರವರು ಕಾವ್ಯ ಎಂದರೆ ಇತಿಹಾಸ ಅಥವಾ ಚರಿತ್ರೆಯಲ್ಲ, ಅದು ಅವುಗಳ ಸಾರ್ವಕಾಲಿಕ ಪ್ರತಿನಿಧಿ ಎಂದು ಹೇಳುತ್ತಾರೆ. ಬೇಂದ್ರೆ ಮತ್ತು ಮಧುರಚೆನ್ನರು ಕಾವ್ಯಕ್ಕೆ ಹೊಸಕಳೆಯನ್ನು ನೀಡಿದರು. ಅಧ್ಯಾತ್ಮ ಮತ್ತು ಅನುಭಾವ ನಿರಂತರತೆಯ ಪ್ರತೀಕ. ನಿತ್ಯನೂತನವಾದ ಕಾವ್ಯ ಮನುಷ್ಯನ ಮನಸ್ಸನ್ನು ಮಾಗಿಸುತ್ತದೆ. ಇಂದಿನ ಮಕ್ಕಳು ಶುಷ್ಕ ವಾತಾವರಣದಲ್ಲಿ ಬೆಳೆದರೆ, ಅವರಿಂದ ಸಂಸ್ಕೃತಿ ಉಳಿಯಲು ಮತ್ತು ಬೆಳೆಯಲು ಸಾಧ್ಯವಿಲ್ಲ ಎಂದು ತಿಳಿಸಿದರು.

ಶ್ರೀಮತಿ ರೂಪ ಗುರುಪ್ರಸಾದ್ ಪ್ರಾರ್ಥಿಸಿದರು. ಡಾ. ಪಳನಿಸ್ವಾಮಿ ಕಾರ್ಯಕ್ರಮ ನಿರ್ವಹಿಸಿದರು.

## ಸಮಾಜಕ್ಕೆ ಹಿತವಾಗುವ ನಡವಳಿಕೆಗಳೇ ಸಂಸ್ಕಾರ



ಸಮಾಜಕ್ಕೆ ಹಿತವಾಗುವಂತಹ ನಡವಳಿಕಗಳೆ ಸಂಸ್ಕಾರ ಎಂದು ಜೆಎಸ್‌ಎಸ್ ಮಹಾವಿದ್ಯಾಪೀಠದ ತಾಂತ್ರಿಕ ಶಿಕ್ಷಣ ವಿಭಾಗದ ಜಂಟಿ ನಿರ್ದೇಶಕರಾದ ಡಾ. ಎಚ್.ಆರ್. ಮಹದೇವಸ್ವಾಮಿರವರು ತಿಳಿಸಿದರು.

ದಿನಾಂಕ 25.4.2022ರಂದು ನಡೆದ 'ಜ್ಞಾನವಾರಿಧಿ-73' ಡಿಜಿಟಲ್ ಸಾಪ್ತಾಹಿಕ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಸ್ಕಾರ ಮತ್ತು ಅದರ ಪ್ರಾಮುಖ್ಯತೆ ವಿಷಯ ಕುರಿತು ಉಪನ್ಯಾಸ ನೀಡುತ್ತಾ ಸಂಸ್ಕಾರ ಜನನದಿಂದಲೇ ಪೂರ್ವಯೋಜಿತವಾಗಿ ಅಸ್ತಿತ್ವದಲ್ಲಿರುತ್ತದೆ. ವ್ಯಕ್ತಿಯ ನೈತಿಕತೆ, ಸ್ವಭಾವ, ನಡವಳಿಕೆ, ಸದ್ಗುಣಗಳು, ಹಿರಿಯರನ್ನು ಗೌರವಿಸುವುದು, ಸಾಮಾಜಿಕ ಶಿಷ್ಟಾಚಾರಗಳ ಪಾಲನೆ ಇವೆಲ್ಲವೂ ಸಂಸ್ಕಾರವನ್ನೇ ಅವಲಂಬಿಸಿರುತ್ತವೆ. ಆತ್ಮ ಪರಿಶುದ್ಧವಾಗಿರಬೇಕು, ದೇಹ ಬಲಿಷ್ಠವಾಗಿರಬೇಕು. ಮೌಲ್ಯ, ಸಂಸ್ಕೃತಿ ಮತ್ತು ನೈತಿಕತೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಗುಣಗಳ ಗುಣಾಕಾರ ಮತ್ತು ದೋಷಗಳ ಭಾಗಾಕಾರವೇ ಸಂಸ್ಕಾರ. ಮುಂದಿನ ಜನಾಂಗಕ್ಕೆ ಈ ಸಂಸ್ಕಾರಗಳನ್ನು ಕೊಂಡೊಯ್ಯುವ ಜವಾಬ್ದಾರಿ ಇಂದಿನ ಯುವಜನರ ಮೇಲಿದೆ. ಪ್ರಾಣಿ ಪಕ್ಷಿಗಳಲ್ಲಿರುವ ಸಹಬಾಳ್ವೆಯ ಗುಣಗಳನ್ನು ಮನುಷ್ಯ ಅಳವಡಿಸಿಕೊಳ್ಳಬೇಕು. ಸಂಸ್ಕಾರಗಳೆಂದರೆ ನಿಯಮಗಳಲ್ಲ, ಅವು ಜೀವನ ವಿಧಾನಗಳು. ಹಾಯ್-ಬಾಯ್ ಸಂಸ್ಕಾರ ನಮ್ಮದಲ್ಲ. ಹಿರಿಯರಿಗೆ ತಲೆಬಾಗಿ ನಮಸ್ಕರಿಸುವುದು ಭಾರತೀಯ ಸಂಸ್ಕಾರ. ಸಂಸ್ಕಾರವುಳ್ಳ ವ್ಯಕ್ತಿ ಮಾತ್ರ ದೇಶದ ಆಸ್ತಿಯಾಗಬಲ್ಲ. ವಿಜ್ಞಾನದ ಹೆಸರಿನಲ್ಲಿ ಅನೇಕ ಸಂಸ್ಕಾರಗಳನ್ನು ಇಂದು ಮೂಢನಂಬಿಕೆಯ ಸಾಲಿಗೆ ತಳ್ಳಿರುವುದು ವಿಷಾದನೀಯ. ಕೃತಜ್ಞತಾ ಗುಣ ಬಹಳ ಮುಖ್ಯ. ಉಪಕಾರವನ್ನು ಎಂದಿಗೂ ಮರೆಯಬಾರದು. ದೌರ್ಜನ್ಯ ರಹಿತ, ಸೌಜನ್ಯ ಸಹಿತ ಸಮಾಜವನ್ನು ನಿರ್ಮಿಸುವ ಗುರಿ ನಮ್ಮದಾಗಬೇಕು ಎಂದು ತಿಳಿಸಿದರು.

ಜೆಎಸ್‌ಎಸ್ ಪಬ್ಲಿಕ್ ಶಾಲೆಯ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಶ್ರೀ ಆರ್.ಎಸ್. ಕುಮಾರ್ ಕಾರ್ಯಕ್ರಮ ನಿರ್ವಹಿಸಿದರು.

## ಶಿವಾನುಭವ ದಾಸೋಹ

### ವಿಚಾರ ಮತ್ತು ಆಚಾರಪೂರ್ಣವಾದದ್ದು ವಚನ ಸಾಹಿತ್ಯ




288ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಮುಡಿಗುಂಡ ಶ್ರೀ ವಿರಕ್ತಮಠದ ಶ್ರೀ ಶ್ರೀಕಂಠ ಸ್ವಾಮಿಗಳವರು ಮಾತನಾಡುತ್ತಿರುವುದು

ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಯ ವತಿಯಿಂದ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಆಶೀರ್ವಾದಗಳೊಂದಿಗೆ ಮೈಸೂರಿನ ಶ್ರೀ ಶಿವರಾತ್ರಿ ರಾಜೇಂದ್ರ ಭವನದಲ್ಲಿ ನಡೆದ 288ನೇ ಶಿವಾನುಭವ ದಾಸೋಹ ಕಾರ್ಯಕ್ರಮದಲ್ಲಿ ಕೊಳ್ಳೇಗಾಲ ತಾಲ್ಲೂಕಿನ ಮುಡಿಗುಂಡ ಶ್ರೀ ವಿರಕ್ತಮಠದ ಶ್ರೀ ಶ್ರೀಕಂಠ ಸ್ವಾಮಿಗಳವರು 'ವಚನಗಳಲ್ಲಿ ವೈಚಾರಿಕ ನಿಲುವು' ಎಂಬ ವಿಷಯ ಕುರಿತು ಮಾತನಾಡುತ್ತಾ, ತನ್ನ ಅರಿವನ್ನು ತಾನು ಅರಿಯಬೇಕು ಎಂಬುದನ್ನು ತೋರಿಸಿಕೊಟ್ಟವರು ಬಸವಾದಿ ಶರಣರು. ಸತ್ಯದ ನಿಲುವು, ಆಚಾರ–ವಿಚಾರಗಳು ಒಂದಾದುದನ್ನು ನಾವು ವಚನ ಸಾಹಿತ್ಯದಲ್ಲಿ ಮಾತ್ರ ಕಾಣಲು ಸಾಧ್ಯ. ಸ್ವಚ್ಛವಾದ ಬದುಕನ್ನು ನೀಡಿ, ನುಡಿದಂತೆ ನಡೆದು, ವಚನ ಸಾಹಿತ್ಯದ ಮೂಲಕ ವೈಚಾರಿಕತೆಯನ್ನು ತಿಳಿಸಿಕೊಟ್ಟವರು ಶರಣರು. ವಿಚಾರ ಮತ್ತು ಆಚಾರ ಪೂರ್ಣವಾದದ್ದು ವಚನ ಸಾಹಿತ್ಯ ಎಂದು ತಿಳಿಸಿದರು.

ಧರ್ಮ ಬದಲಾಗುವುದಿಲ್ಲ, ಆದರೆ ಸಮಾಜ ಬದಲಾಗುತ್ತದೆ. ಸಮರ್ಪಣ ಭಾವವೇ ಭಕ್ತಿ, ದೇಹವನ್ನು ಸುಸ್ಥಿತಿಯಲ್ಲಿಡಬೇಕು. ಧರ್ಮದ ಅರಿವಿಲ್ಲದವರು ಧರ್ಮದ ಬಗ್ಗೆ ಮಾತನಾಡಬಾರದು. ಡಾ. ಫ.ಗು. ಹಳಕಟ್ಟಿಯವರು ಶರಣ ಸಾಹಿತ್ಯ ಎಂಬ ಶೀರ್ಷಿಕೆಯಡಿಯಲ್ಲಿ ಲಭ್ಯವಿದ್ದ ಸಮಗ್ರ ವಚನ ಸಾಹಿತ್ಯವನ್ನು ಸ್ವಂತ ಹಣದಿಂದ ಪ್ರಕಟಿಸಿದರು. ಹಳಕಟ್ಟಿಯವರ ನಂತರ ಬಂದ ಡಾ. ಆರ್.ಸಿ. ಹಿರೇಮಠ, ಡಾ. ಎಲ್. ಬಸವರಾಜು, ಡಾ. ಹೆಚ್. ತಿಪ್ಪೇರುದ್ರಸ್ವಾಮಿ, ಡಾ. ಎಂ.ಎಂ. ಕಲಬುರ್ಗಿ ಮೊದಲಾದ ಸಾಹಿತಿಗಳು ವಚನ ಸಾಹಿತ್ಯವನ್ನು ಪ್ರಸಾರ ಮಾಡಿದರು. ವಚನಗಳು ಬರೀ ಸಾಹಿತ್ಯವಲ್ಲ, ಅವು ಮಂತ್ರಗಳಾಗಿವೆ ಎಂದರು.

ಅಗರದ ಶ್ರೀಕಲ್ಮಠ ಹಾಗೂ ಮೈಸೂರಿನ ಶ್ರೀ ನೀಲಕಂಠಸ್ವಾಮಿ ಮಠದ ವಿದ್ವಾನ್ ಶ್ರೀ ಸಿದ್ಧಮಲ್ಲ ಸ್ವಾಮಿಗಳು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಕುವೆಂಪುನಗರದ ಶ್ರೀ ಎಸ್. ನಾಗಮ್ಮ ಷಡಕ್ಷರಿಯವರು ಪ್ರಾಯೋಜಕತ್ವವನ್ನು ವಹಿಸಿದ್ದರು. ಕು. ಎನ್. ಚೂಡಾಮಣಿಯವರು ವಚನಗಾಯನವನ್ನು ನಡೆಸಿಕೊಟ್ಟರು.

ಜೆಎಸ್‌ಎಸ್ ಅಂಧರ ವಿದ್ಯಾರ್ಥಿನಿಲಯದ ವಿದ್ಯಾರ್ಥಿಗಳಾದ ಕು. ವಿ.ಜೆ. ಹೇಮಾವತಿ ಸ್ವಾಗತಿಸಿದರು. ಕು. ಹೆಚ್.ಎಸ್. ಛಾಯಾದೇವಿ ನಿರೂಪಿಸಿದರು. ಕು. ಎಂ. ಶೈಲಜಾರವರು ವಂದಿಸಿದರು.

## ಹೊಲಿಗೆ ತರಬೇತಿಯ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರ ವಿತರಣೆ



**ಮೈಸೂರಿನ ಜೆಎಸ್‌ಎಸ್ ಜನಶಿಕ್ಷಣಾ ಸಂಸ್ಥೆ, ಸುತ್ತೂರಿನ ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ** ಹಾಗೂ ಪುಣ್ಯಭೂಮಿ ಟ್ರಸ್ಟ್ ಸಹಯೋಗದಲ್ಲಿ ದಿನಾಂಕ 12.4.2022ರಂದು ಹೊಲಿಗೆ ತರಬೇತಿಯ ಶಿಬಿರಾರ್ಥಿಗಳಿಗೆ ಪ್ರಮಾಣ ಪತ್ರವನ್ನು ವಿತರಿಸುವ ಕಾರ್ಯಕ್ರಮವನ್ನು ಮೈಸೂರು ತಾಲ್ಲೂಕಿನ ಪಿಲ್ಲಹಳ್ಳಿ ಗ್ರಾಮದಲ್ಲಿ ಹಮ್ಮಿಕೊಳ್ಳಲಾಗಿತ್ತು.

ಈ ತರಬೇತಿಯು 4 ತಿಂಗಳ ಅವಧಿಗೆ ನಡೆದಿದ್ದು, ಪಿಲ್ಲಹಳ್ಳಿ ಗ್ರಾಮದ 20 ಮಹಿಳೆಯರು ಭಾಗವಹಿಸಿದ್ದರು. ಕಾರ್ಯಕ್ರಮದಲ್ಲಿ ಜೆಎಸ್‌ಎಸ್ ಜನ ಶಿಕ್ಷಣಾ ಸಂಸ್ಥೆಯ ನಿರ್ದೇಶಕರಾದ ಶ್ರೀಮತಿ ಡಿ.ಎಮ್. ಶಶಿಕಲಾ, ಜೆಎಸ್‌ಎಸ್ ಕೆವಿಕೆಯ ಪ್ರಭಾರ ಹಿರಿಯ ವಿಜ್ಞಾನಿ ಹಾಗೂ ಮುಖ್ಯಸ್ಥರಾದ ಶ್ರೀಮತಿ ಹೆಚ್.ವಿ. ದಿವ್ಯಾ, ಗೃಹ ವಿಜ್ಞಾನಿ ಶ್ರೀಮತಿ ನೇತ್ರಾವತಿ ಎತ್ತಿನಮನಿ, ಲಯನ್ಸ್ ಕ್ಲಬ್‌ನ ಸಿಬ್ಬಂದಿಗಳಾದ ಶ್ರೀ ಅಚ್ಯುತ್ ರಾವ್, ಶ್ರೀ ಮಂಜುನಾಥ, ಶ್ರೀ ಚಂದ್ರಶೇಖರ್, ಭಾರತೀಯ ಕಿಸಾನ್ ಸಂಘದ ಜಿಲ್ಲಾ ಕಾರ್ಯದರ್ಶಿಗಳಾದ ಶ್ರೀ ಸತ್ಯಮೂರ್ತಿ ಹಾಗೂ ಆರ್‌ಎಸ್‌ಎಸ್‌ನ ಸೇವಾ ವಿಭಾಗದವರಾದ ಶ್ರೀ ಮಂಜುನಾಥ, ಪಿಲ್ಲಹಳ್ಳಿ ಗ್ರಾಮದ ಮುಖಂಡರುಗಳಾದ ಶ್ರೀ ರಾಮಚಂದ್ರ, ಶ್ರೀ ನಿಂಗಪ್ಪ, ಶ್ರೀ ನಂಜುಂಡಸ್ವಾಮಿ ಹಾಗೂ ತರಬೇತುದಾರರಾದ ಶ್ರೀಮತಿ ನಾಗಮ್ಮ, ಜೆಎಸ್‌ಎಸ್ ಜನ ಶಿಕ್ಷಣಾ ಸಂಸ್ಥೆಯ ಸಿಬ್ಬಂದಿಗಳಾದ ಕು. ಸಿ.ಎಸ್. ಸುಮಾ, ಕು. ಸುಜಾತಾ ಹಾಗೂ ಗಿರೀಶ್‌ರವರು ಉಪಸ್ಥಿತರಿದ್ದರು. ಸಮಾರಂಭದಲ್ಲಿ ಶಿಬಿರಾರ್ಥಿಗಳಿಗೆ ಪ್ರಮಾಣಪತ್ರವನ್ನು ವಿತರಿಸಲಾಯಿತು.

## ರೈತ ಭಾಗಿದಾರಿಕೆ ನಮ್ಮ ಆದ್ಯತೆ

ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಭಾರತ ಸರ್ಕಾರದ ಕೃಷಿ ಸಚಿವಾಲಯ ದೇಶಾದ್ಯಂತ ಆಯೋಜಿಸಿದ್ದ ರೈತ ಭಾಗಿದಾರಿಕೆ ನಮ್ಮ ಆದ್ಯತೆ (ಕಿಸಾನ್ ಭಾಗಿದಾರಿ ಪ್ರಾಥಮಿಕಾ ಹಮಾರಿ) ಕಾರ್ಯಕ್ರಮವನ್ನು **ಐಸಿಎಆರ್ ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರ** ಹಾಗೂ ಆತ್ಮಾ ಯೋಜನೆ, ಕೃಷಿ ಇಲಾಖೆ ಮೈಸೂರು ಸಹಯೋಗದೊಂದಿಗೆ ಸುತ್ತೂರಿನಲ್ಲಿ ಆಯೋಜಿಸಲಾಗಿತ್ತು.

ನಂಜನಗೂಡು ತಾಲ್ಲೂಕಿನ ಬಿಳಿಗೆರೆ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀಮತಿ ಮಹದೇವಮ್ಮರವರು ಕಾರ್ಯಕ್ರಮವನ್ನು ಉದ್ಘಾಟಿಸಿದರು. ನೇರ ಪ್ರಸಾರದ ಮೂಲಕ ಕೇಂದ್ರ ಸರ್ಕಾರದ ಕೃಷಿ ಸಚಿವರಾದ ಶ್ರೀ ನರೇಂದ್ರಸಿಂಗ್ ತೋಮರ್‌ರವರು ಕೇಂದ್ರ ಸರ್ಕಾರವು ರೈತರ ಅಭಿವೃದ್ಧಿಗಾಗಿ ಕೈಗೊಂಡಿರುವ ಯೋಜನೆಗಳ ಕುರಿತು ಮಾಹಿತಿ ನೀಡಿದರು.



ಟಿ. ನರಸೀಪುರ ತಾಲ್ಲೂಕಿನ ಮಾಡ್ರಳ್ಳಿಯ ಭತ್ತದ ತಳಿಗಳ ಸಂರಕ್ಷಕರೂ ಪ್ರಗತಿಪರ ರೈತರೂ ಆದ ಶ್ರೀ ಶಂಕರ್‌ಗುರು, ನಂಜನಗೂಡು ತಾಲ್ಲೂಕಿನ ಹೆಡಿಯಾಲ ಗ್ರಾಮದ ಜೇನು ಕೃಷಿಯ ಪ್ರಗತಿಪರ ರೈತರಾದ ಶ್ರೀ ಜಯಶಂಕರ್ ಹಾಗೂ ಮೈಸೂರು ತಾಲ್ಲೂಕಿನ ಜಯಪುರ ಗ್ರಾಮದ ತೆಂಗು ಬೆಳೆಯ ಪ್ರಗತಿಪರ ರೈತರಾದ ಶ್ರೀ ರೋಹಿತ್‌ರವರುಗಳನ್ನು ಸನ್ಮಾನಿಸಲಾಯಿತು. ಸಿರಿಧಾನ್ಯಗಳಿಂದ ತಯಾರಿಸಿದ ಮೌಲ್ಯವರ್ಧಿತ ಆಹಾರ, ಸಾವಯವ ಆಹಾರ ಪದಾರ್ಥಗಳ ವಸ್ತುಪ್ರದರ್ಶನ ಹಾಗೂ ಮಾರಾಟವನ್ನು ಆಯೋಜಿಸಲಾಗಿತ್ತು.

300ಕ್ಕೂ ರೈತ ಹಾಗೂ ರೈತ ಮಹಿಳೆಯರು ಭಾಗವಹಿಸಿದ್ದರು. ಮೈಸೂರು ಜಿಲ್ಲೆಯ ನಬಾರ್ಡ್ ಜಿಲ್ಲಾಭಿವೃದ್ಧಿ ವ್ಯವಸ್ಥಾಪಕರಾದ ಶ್ರೀ ಟಿ.ವಿ. ಸುಬ್ಬಯ್ಯ, ಸುತ್ತೂರು ಜೆಎಸ್‌ಎಸ್ ಸಂಸ್ಥೆಗಳ ಸಹಾಯಕ ಸಂಯೋಜನಾಧಿಕಾರಿಯಾದ ಶ್ರೀ ವಿ. ವೀರಭದ್ರಯ್ಯ, ಮೈಸೂರು ಜಿಲ್ಲೆಯ ಕೃಷಿ ಇಲಾಖೆಯ ಆತ್ಮಾ ಯೋಜನೆಯ ಉಪ ಯೋಜನಾ ನಿರ್ದೇಶಕರಾದ ಶ್ರೀಮತಿ ಕುಮುದಾ, ಜೆಎಸ್‌ಎಸ್ ಕೃಷಿ ವಿಜ್ಞಾನ ಕೇಂದ್ರದ ಮುಖ್ಯಸ್ಥರುಗಳಾದ ಶ್ರೀ ಮಂಜುನಾಥ ಅಂಗಡಿ ಹಾಗೂ ಶ್ರೀಮತಿ ಹೆಚ್.ವಿ. ದಿವ್ಯಾ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

## ಆರೋಗ್ಯ ತಪಾಸಣಾ ಶಿಬಿರ

### ಆರೋಗ್ಯವೇ ಭಾಗ್ಯ– ಆರೋಗ್ಯವಿದ್ದರೆ ಎಲ್ಲವೂ ಸಾಧ್ಯ

**ಮೈಸೂರು ಜೆಎಸ್‌ಎಸ್ ಸ್ಕೂಲ್ ಆಫ್ ನರ್ಸಿಂಗ್‌ನಿಂದ** ವಿಶ್ವ ಆರೋಗ್ಯ ದಿನಾಚರಣೆಯನ್ನು ದಿನಾಂಕ 12.4.2022ರಂದು ಆಯೋಜಿಸಲಾಗಿತ್ತು.

ಪ್ರಾಂಶುಪಾಲರಾದ ಶ್ರೀಮತಿ ಡಿ.ಎನ್. ರೇಣುಕಾದೇವಿ ಯವರು ಮಾತನಾಡುತ್ತಾ ಆಹಾರ ಎಲ್ಲರ ಆರೋಗ್ಯದ ಮೇಲೆ ಹೇಗೆ ಪರಿಣಾಮ ಬೀರುತ್ತದೆ ಎಂಬುದರ ಬಗ್ಗೆ ಜನರು ಹೆಚ್ಚು ಗಮನವನ್ನು ವಹಿಸಬೇಕು. ಆರೋಗ್ಯಕರ ಪೌಷ್ಠಿಕಾಂಶದ ಮಹತ್ವದ ಬಗ್ಗೆ ಸಾರ್ವಜನಿಕರಿಗೆ ತಿಳುವಳಿಕೆ ನೀಡುವ ಜವಾಬ್ದಾರಿ ಆರೋಗ್ಯ ಕಾರ್ಯಕರ್ತರ ಮೇಲೆ ಇದೆ. ವಿಶ್ವ ಆರೋಗ್ಯ ದಿನದಂದು ಎಲ್ಲಾ ಶುಶ್ರೂಷಕರು ಆರೋಗ್ಯದ ಅಸಮಾನತೆಗಳನ್ನು ಹೋಗಲಾಡಿಸಲು ಕ್ರಮ ಕೈಗೊಳ್ಳಬೇಕು ಎಂದು ಕರೆ ನೀಡಿದರು.

ಈ ವರ್ಷದ ಘೋಷಣಾ ವಾಕ್ಯ ನಮ್ಮ ಗ್ರಹ ನಮ್ಮ ಆರೋಗ್ಯ ಎಂಬುದರ ಬಗ್ಗೆ ಪವರ್ ಪಾಯಿಂಟ್ ಪ್ರಸ್ತುತಿ ಸ್ಪರ್ಧೆಯನ್ನು ಅಂತರ ತರಗತಿ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿತ್ತು. ಪವರ್ ಪಾಯಿಂಟ್ ಪ್ರಸ್ತುತಿ ಸ್ಪರ್ಧೆಯಲ್ಲಿ ಉತ್ತಮವಾಗಿ ಪ್ರಸ್ತುತಪಡಿಸಿದ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಯಿತು. ದ್ವಿತೀಯ ವರ್ಷದ ಶ್ರೀ ಪಿ.ಜೆ. ಜಿತಿನ್ ಪ್ರಥಮ, ಮೊದಲನೇ ವರ್ಷದ ವಿದ್ಯಾರ್ಥಿಗಳಾದ ಕು. ಟೆನ್ಜಿನ್‌ಕುನ್ಸೆಲ್ ದ್ವಿತೀಯ ಹಾಗು ಶ್ರೀ ಟೆನ್ಜಿನ್‌ಡಕ್ಪ್ ತೃತೀಯ ಸ್ಥಾನ ಪಡೆದರು. ಶ್ರೀಮತಿ ಎಸ್. ನೀತಾಡಳ್ವಿ ಮತ್ತು ಶ್ರೀಮತಿ ಕೆ.ವಿ. ಮಂಜುಳ ತೀರ್ಪುಗಾರರಾಗಿದ್ದರು. ಅಂತರ್ ಕಾಲೇಜು ಪೆನ್ಸಿಲ್ ಸ್ಕೆಚ್ ಸ್ಪರ್ಧೆಯಲ್ಲಿ ದ್ವಿತೀಯ ವರ್ಷದ ವಿದ್ಯಾರ್ಥಿನಿಯರಾದ ಕು. ಜುಲೇಕ ಪರ್ವಿನ್ ಹಾಗು ಕು. ಸ್ವರ್ಣಾಲಿ ಸರ್ಕಾರ್‌ರವರು ಬಹುಮಾನಗಳನ್ನು ಪಡೆದರು. ಕಾರ್ಯಕ್ರಮವನ್ನು ಶ್ರೀಮತಿ ಎಂ. ಮಾನಸ ಸಂಯೋಜಿಸಿದರು.

***



ಎನ್‌ಜೆಎಸ್ ಚಾರಿಟಬಲ್ ಟ್ರಸ್ಟ್(ರಿ.), ಮೈಸೂರು ಇವರ ವತಿಯಿಂದ **ಜೆಎಸ್‌ಎಸ್ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆ, ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ,** ಅನ್ನಪೂರ್ಣ ಕಣ್ಣಿನ ಆಸ್ಪತ್ರೆ, ಹಾಗೂ ಯೋಗ ಪ್ರಾಣ ವಿದ್ಯಾಕೇಂದ್ರ, ಮೈಸೂರು ಇವರ ಸಹಭಾಗಿತ್ವದೊಂದಿಗೆ ದಿನಾಂಕ 9.4.2022ರಂದು ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಈ ಶಿಬಿರದಲ್ಲಿ ಆಮ್ಲಪಿತ್ತ, ಚರ್ಮರೋಗ, ಕೆಮ್ಮು, ಬೆನ್ನುನೋವು, ಕುತ್ತಿಗೆನೋವು, ಉಸಿರಾಟದ ತೊಂದರೆ, ಕೀಲುನೋವು, ಮಧುಮೇಹ, ಮಂಡಿನೋವು ಖಾಯಿಲೆಗಳಿಗೆ ತಪಾಸಣೆ ಹಾಗೂ ಸಲಹೆಗಳನ್ನು ನೀಡಲಾಯಿತು.

ಶಿಬಿರದಲ್ಲಿ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಕೆ.ಓ. ನಂದಾ, ಡಾ. ಅಯ್ಯಣ್ಣ, ಡಾ. ಅಶ್ವಿನಿ, ಕಲಿಕಾ ವೈದ್ಯರುಗಳು, ಹಾಗೂ ಕಛೇರಿಯ ಸಿಬ್ಬಂದಿಗಳು ಭಾಗವಹಿಸಿದ್ದರು.




**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯ** ಶಲ್ಯತಂತ್ರ ವಿಭಾಗದಿಂದ ಮತ್ತು ಸರಗೂರು ವಿವೇಕಾನಂದ ಮೆಮೊರಿಯಲ್ ಆಸ್ಪತ್ರೆಯ ಸಹಯೋಗದೊಂದಿಗೆ ದಿನಾಂಕ 12.4.2022ರಂದು ಉಚಿತ ತಪಾಸಣಾ ಶಿಬಿರವನ್ನು ಹಮ್ಮಿಕೊಳ್ಳಲಾಗಿತ್ತು.

ಶಲ್ಯತಂತ್ರ ವಿಭಾಗಕ್ಕೆ ಸಂಬಂಧಪಟ್ಟ ವ್ಯಾಧಿಗಳಿಗೆ ಅಂದರೆ ಪೈಲ್ಸ್, ಫಿಸ್ತುಲಾ, ಫಿಷರ್, ಹರ್ನಿಯಾ ಮತ್ತು ಇತರೇ ಶಸ್ತ್ರಚಿಕಿತ್ಸಾ ಸಾಧ್ಯ ವ್ಯಾಧಿಗಳಿಗೆ ತಪಾಸಣೆ ಹಾಗೂ ಸಲಹೆಯನ್ನು ನೀಡಲಾಯಿತು. ಶಿಬಿರಕ್ಕೆ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಸಿದ್ದೇಶ್ ಆರಾಧ್ಯಮಠ್, ಡಾ. ಪೂರ್ಣಿಮಾ ಜಲವಾದಿ, ಸ್ನಾತಕೋತರ ವಿದ್ಯಾರ್ಥಿಗಳು, ಕಲಿಕಾ ವೈದ್ಯರುಗಳು, ಶುಶ್ರೂಷಕರನ್ನು ನಿಯೋಜಿಸಲಾಗಿತ್ತು.

136 ಮಂದಿ ಶಿಬಿರದ ಪ್ರಯೋಜನ ಪಡೆದರು, ಅದರಲ್ಲಿ 20 ಮಂದಿ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗಿದ್ದು ಅವರಿಗೆ ಆಸ್ಪತ್ರೆಯ ವತಿಯಿಂದ ವಿಶೇಷ ರಿಯಾಯಿತಿ ದರದಲ್ಲಿ ಚಿಕಿತ್ಸೆಯನ್ನು ಮಾಡಲಾಗುವುದೆಂದು ತಿಳಿಸಲಾಗಿದೆ.

□

***



**ಜೆಎಸ್‌ಎಸ್ ಆಯುರ್ವೇದ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯು ಜೆಎಸ್‌ಎಸ್ ಶಿಕ್ಷಕರ ಪ್ರಶಿಕ್ಷಣ ಸಂಸ್ಥೆ, ಸುತ್ತೂರು** ಇವರ ಸಹಯೋಗದೊಂದಿಗೆ ಮೈಸೂರು ಜಿಲ್ಲೆಯ ನಂಜನಗೂಡು ತಾಲ್ಲೂಕಿನ ಅಳಗಂಚಿ ಗ್ರಾಮದಲ್ಲಿ ಎನ್‌ಎಸ್‌ಎಸ್ ವಾರ್ಷಿಕ ಶಿಬಿರದ ಪ್ರಯುಕ್ತ ದಿನಾಂಕ 19.4.2022ರಂದು ಉಚಿತ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿತ್ತು. ಶಿಬಿರಕ್ಕೆ ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆಯಿಂದ ಡಾ. ಉನ್ನಿಕೃಷ್ಣನ್, ಡಾ. ಶಶಿಬಿಂದು, ಕಲಿಕಾ ವೈದ್ಯರುಗಳು ಹಾಗೂ ಕಛೇರಿಯ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು. ಗ್ರಾಮದ 117ಕ್ಕೂ ಹೆಚ್ಚು ಜನರು ಈ ಶಿಬಿರದ ಸದುಪಯೋಗ ಪಡೆದುಕೊಂಡರು.

## ಸಾಧನೆ

### ಶ್ರೀಮತಿ ಎಸ್. ನಾಗಶ್ರೀಯವರಿಗೆ ಯುವ ಎಥ್ನೋಫಾರ್ಮಾಕಲಿಜಿಸ್ಟ್ ಪ್ರಶಸ್ತಿ



**ಜೆಎಸ್‌ಎಸ್ ಸಂಶೋಧನಾ ಪ್ರತಿಷ್ಠಾನ ಮತ್ತು ಮೈಸೂರಿನ ಊಟಿ ರಸ್ತೆ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ** ಸಂಶೋಧನಾ ವಿದ್ಯಾರ್ಥಿ ಶ್ರೀಮತಿ ಎಸ್. ನಾಗಶ್ರೀಯವರಿಗೆ ಯುವ ಎಥ್ನೋ ಫಾರ್ಮಾಕಲಿಜಿಸ್ಟ್ ಪ್ರಶಸ್ತಿ (ಪಿ.ಕೆ. ದೇಬ್‌ನಾಥ್ ಸ್ಮಾರಕ ಪ್ರಶಸ್ತಿ)–2022 ಅನ್ನು ಮೈಸೂರಿನ ಜೆಎಸ್‌ಎಸ್ ಫಾರ್ಮಸಿ ಕಾಲೇಜಿನಲ್ಲಿ ಇದೇ ತಿಂಗಳ 22 ರಿಂದ 24 ರವರೆಗೆ ನಡೆದ ಭಾರತದ ಎಥ್ನೋಫಾರ್ಮಾಕಾಲಜಿ ಸೊಸೈಟಿಯ (ಎಸ್‌ಎಫ್‌ಇಸಿ–2022) 9ನೇ ಅಂತಾರಾಷ್ಟ್ರೀಯ ಸಮಾವೇಶದಲ್ಲಿ ನೀಡಲಾಗಿದೆ.

ಈ ಸಮಾವೇಶದಲ್ಲಿ 2000 ಕ್ಕೂ ಹೆಚ್ಚು ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಇವರಲ್ಲಿ ಸುಮಾರು 560 ಮಂದಿ ಪ್ರತಿನಿಧಿಗಳು ತಮ್ಮ ಸಂಶೋಧನಾ ಕಾರ್ಯವನ್ನು ಪೋಸ್ಟರ್‌ಗಳ ರೂಪದಲ್ಲಿ ಪ್ರಸ್ತುತಪಡಿಸಿದರು. 131 ಪ್ರತಿನಿಧಿಗಳು ಮೌಖಿಕವಾಗಿ ತಮ್ಮ ಸಂಶೋಧನೆಯನ್ನು ಪ್ರಸ್ತುತಪಡಿಸದರು. 131 ಪ್ರತಿನಿಧಿಗಳಲ್ಲಿ ಕೇವಲ 30 ಮಂದಿ ಯುವ ಎಥ್ನೋಫಾರ್ಮಾಕಲಿಜಿಸ್ಟ್ ಪ್ರಶಸ್ತಿ ಸ್ಪರ್ಧೆ–2022ಕ್ಕೆ ನಾಮ ನಿರ್ದೇಶನಗೊಂಡರು. ಶ್ರೀಮತಿ ಎಸ್. ನಾಗಶ್ರೀಯವರು ತಮ್ಮ ಸಂಶೋಧನಾ ಪ್ರಬಂಧವನ್ನು ಮಂಡಿಸಿ ಪ್ರಥಮ ಸ್ಥಾನವನ್ನು ಪಡೆದಿದ್ದಾರೆ. ಶ್ರೀಮತಿ ಎಸ್. ನಾಗಶ್ರೀಯವರು ಕಾಲೇಜಿನ ಸ್ನಾತಕೋತ್ತರ ಜೀವರಸಾಯನಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ. ಚೇತನ್ ಕುಮಾರ್‌ರವರ ಮಾರ್ಗದರ್ಶನದಲ್ಲಿ ಪಿಎಚ್.ಡಿ. ಸಂಶೋಧನೆ ಕೈಗೊಂಡಿದ್ದಾರೆ.

### ಜೆಎಸ್‌ಎಸ್ ಕಾಲೇಜಿಗೆ ಉತ್ತಮ ರ್‍ಯಾಂಕ್

ಎಜ್ಯುಕೇಷನ್ ವರ್ಲ್ಡ್ ಸಂಸ್ಥೆಯು 2022–23ನೇ ಸಾಲಿಗೆ ನಡೆಸಿದ ದೇಶದ 871 ಸ್ವಾಯತ್ತ ಕಾಲೇಜುಗಳ ಮೌಲ್ಯಮಾಪನದಲ್ಲಿ **ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜು** ರಾಜ್ಯಮಟ್ಟದಲ್ಲಿ 5ನೇ ರ್‍ಯಾಂಕ್ ಹಾಗೂ ರಾಷ್ಟ್ರಮಟ್ಟದಲ್ಲಿ 25ನೇ ರ್‍ಯಾಂಕ್, **ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು** ರಾಜ್ಯಮಟ್ಟದಲ್ಲಿ 13ನೇ ರ್‍ಯಾಂಕ್ ಹಾಗೂ ರಾಷ್ಟ್ರಮಟ್ಟದಲ್ಲಿ 72ನೇ ರ್‍ಯಾಂಕ್ ಪಡೆದಿವೆ.

## Mega Health Camp




A Mega Health Camp was held at **JSS Mangalamantapa, Nanjangud** on 1.5.2022.

The Camp was inaugurated by H.H. Jagadguru Sri Shivarathri Deshikendra Mahaswamiji. The President, Secretary and Members of Rotary Nanjangud were present, along with the Medical Superintendent JSS Hospital, Dr. C.P. Madhu, Deputy Director of the Hospital, Dr. Shyam Prasad Shetty, HODs and Doctors attending the Camp and also the Marketing Team of the Hospital.

Sri V. Srinivas Prasad MP and Sri Harshawardhan, MLA, Nanjangud, who attended the camp and expressed their happiness and called on the people of Nanjangud to utilize the benefits of the camp.

Eleven doctors from various departments were present in the camp. A total of 698 patients were screened. 105 ECG, 53 ECHO and 431 CBG were done. 144 patients were referred to the hospital. The camp was conducted in co-ordination with Rotary Nanjangud, Who have distributed Medicines worth Rs 60,000/-.

## A Humane International Initiative

As part of internationalization and support education, as desired H.H. Jagadguru Sri Shivaratri Deshikendra Mahaswamiji has graciously offered to support the displaced Indian students who were studying medical course at Ukraine, Russia, China etc.

In the Press Meet held on 1.5.2022 Swamiji informed that 511 applications were received within 48 hours of the



announcement, 321 are from Karnataka. He informed that both theory and practical classes will be conducted and clinical observation will be provided to them, along with skill training using skill lab and virtual case scenario. This bridge course will be provided free of cost. However, during practicals the students can only observe the patients as they would not be authorized to examine them or administer treatment.

Dr B. Suresh, Pro-Chancellor, JSS Academy of Higher Education and Research, Mysuru. informed that the course will be held in four batches and classes will be tailor-made, to suit the course requirement of those students, through course mapping. Teaching will be based on relevance of the curriculum taught at their respective institutions.

Vice-Chancellor of JSS AHER, Mysuru, Dr. Surinder Singh said that, after a brainstorming session, the course has been designed in such a way that it would bridge the gap between knowledge and skill that has occurred due to unforeseen circumstances.

## Autism Awareness Program

As a Nobel initiative from the Federation of Special Care Dentistry, Autism Board, in association with Department of Peediatric and Preventive Dentistry, **JSS Dental College & Hospital**, conducted a unique program to bring in awareness among the children, parents and teachers of JSS Sahana Special School at Mysuru and Bangaluru, on 28.4.2022.

A talk by Dr. M. Kishor, Asso. Prof. of Psychiatry, JSS Medical College, Mysuru was organized by Dr. B. Nandlal, Vice-Chair of Autism Board, Dr. Raghavendra Shanbhog and Dr. H.P. Chanchala on



pervasive developmental disorder. Invocation was done by Sri Lakshmikanth, an alumnus of JSS Sahana School. The program was well-appreciated by the Dr. Srinivas Namineni, President, FSCD, Dr. Priya Verma, General Secretary, FSCD, Dr. Sham S. Bhat, Chair Autism Board (FSCD), who were present at the program on the virtual platform.

## Academy of Technical Education



The NSS unit of **JSS Academy of Technical Education, Bengaluru** organized Campus Cleaning Drive at the campus on 19.3.2022. About 54 volunteers participated in the program.

Dr. N. Girish, NSS Programme Officer greeted all and conveyed instructions to the volunteers about the program. The volunteers are advised to follow all the covid protocols.

The volunteers took the following pledge along with NSS Programme Officer: "I take this pledge that I will remain committed towards cleanliness and devote time for this. I will devote 100 hours per year, that is two hours per week, to voluntarily work for cleanliness. I will neither litter not let others litter. I will initiate the quest for cleanliness with

myself, my family, my locality, my village and my work place."

Volunteers were divided into four groups and assigned different location in the campus. They participated enthusiastically in the cleaning drive. Refreshments were provided to the volunteers.

## International Noise Awareness Day




The International Noise Awareness Day was observed on 27.4.2022 at **JSS Institute of Speech and Hearing, Mysuru**. Several activities were carried out by the Department of Audiology. JSS Institute of Speech and Hearing, Mysuru.

These activities were intended to create awareness about the effect and consequences of noise on the hearing and prevention of noise-induced hearing loss. As part of the program, a walkathon was organized. Where in 80 participants joined including staff and students. The event began from JSSISH, Ramanuja Road, and headed towards Sayyaji Rao Road to reach Chikka Gadiyara. The points highlighed during the walkathon were different sources of noise, the effect of noise on the hearing system, and the ways to porevent hearing lossss caused by noise. The information was represented with pictures and slogans.

In addition, flash mob, skit, and speech were organized at Chikka Gadiyara and at Mall of Mysuru. The activities highlighted the ill effects of loud noise and the ways to avoid it.

A newspaper section on the effect of noise-induced hearing loss and its prevention written by Dr. Asha Yathiraj and Ms. Monica ws published in "Star of Mysore" (Enlgish) and Prajasathya (Kannada). Which would help even the ordinary people to understand this problem.

## Naturopathy camps conducted



Azadi Ka Amrit Mahotsav, an initiative of the Govt. of India aims to celebrate the 75 years of Independence and the glorious history of its people, culture and achievements. As part of this, JSS Institute of Naturopathy and Yogic Sciences, Coimbatore conducted Naturopathy camps at Coimbatore with inputs from the Ministry of AYUSH, Govt. of India and National Institute of Naturopathy, Pune and guidance from Principal Dr. V.R. Dhilip. The theme, of the camps was "Lifestyle guidelines for promoting immunity during COVID-19". Six camps were conducted during February 2022. The activities included health talk by Naturopathy and Yoga doctors on chair yoga session for the participants followed by health check-up, consultation, diet counseling and diet chart prescription. Health shop products and therapeutic diet were also displayed and explained to the participants. IEC material on measures to prevent COVID -19, AYUSH prophylactic medicine (Arsenicum album) was distributed to everyone. Immune decoction was also served during the camp. An awareness was created abut the importance of following Naturopathy and Yoga for preventing lifestyle diseases as well as COVID-19 through these camps.

The details of the camps are as follows:

| Sl. No | Date | Venue | No. of Beneficiaries |
|---|---|---|---|
| 1. | 6.4.2022 | JSS Instiutte of Naturopathy and Yogic Sciences, Coimbatore | 87 |
| 2. | 9.4.2022 | Wewino, BK Pudur, Kuniyamuthur | 96 |
| 3. | 30.4.2022 | Wewino, BK Pudur, Kuniyamuthur | 89 |

## Induction Program

The induction program for the 25th batch of JSSINYS students was held on 6.4.2022. A total of 450 persons was present including the students and parents. The event was graced by the presence of Dr. B.T.C. Murthy and Dr. Sivakumar and



alumni of JSSINYS. The program began with on invocation. This was followed by lighting the lamp by the dignitaries, and a volunteer from parents and students. The welcome address was given by the Sri Shanmugham, Administrative Officer, Dr. B.T.C. Murthy inspired the students and parents in his address. Dr. Dhilip, Principal detailed the salient features and achievements of JSSINYS with a power point presentation. The rules, regulation and daily regimen for the students were briefed by Dr. T. Selvameenakshi. This was followed by testimonial from our alumni Dr. Sivakumar and intern, Ms. Ashwathika and final year student, Ms. Preethi. The gathering was entertained by an astonishing yoga performance by the third year students. Dr. Sharmila a student volunteer shared her gratitude on behalf of JSSINYS and the program concluded with National Anthem.

## KALARAVA Sambhrama-2021



**JSS School of Nursing, Kollegal** conducted the naugural ceremony of the Annual Cultural and Literary Meet - Kalarava - 2021 on 28.4.2022.

The dignitaries were Sri C.M. Narasimhamurthy, Theatre Artist and Member of Karnataka Janapada Academy, Bengaluru and Sri Arun Kumar, President,

Sugama Sangeetha Parishad. The programme was presided by Sri D.G. Vishakantamurthy, Principal, of the School. Smt. T. Ranganayaki, Vice-Principal, Smt. Jayashree, Sri Naveen Kumar, Ku. B.P. Kavya, Cultural Programme Co-ordinator of the School were present.

The programme was inaugurated by lighting the lamp. Inaugural speech was delivered by Sri C.M. Narasimhamurthy, Who stressed on the importance of art and tradition in life. He also encouraged the students to engage in some artistic activities apart from academic activities. He entertained the audience through his singing as well. Later on Sri Arun Kumar, in his lecture, said that curricular and co-curricular activities are part of student life and the participation is in both is important in order to maintain their mental and physical health.

The Principal, delivered the presidential address, where he said that cultural programmes give an opportunity for students to showcase their talents and help them to reduce day-to-day stress. He encouraged the students to take part actively in the two day programme.

The programme was concluded by vote of thanks. Various competitions were organized from 28th -30th April 2022 in Kalarava held. The Vachanadharita Dance, Solo Song, Group Song, Duet Song, Solo Dance, Group Dance, Fancy Dress, Mime, Fashion Show Mr. & Ms. JSSSONK were the on-stage events, where as the off stage events were Rangoli, Pot Painting, Cartooning, Drawing, Vegetable Carving, Photography and Short Movie.

## Annual Sports Meet

JSS School of Nursing Kollegal organized its Annual Sports Meet - Sangarsha - 2021-22 from 5th -7th May 2022.

The inauguration was held on 5.5.2022 by invoking God's blessings through prayers. Sri Doddappaji, International Marathon Athlete and Director, Department of Physical education, JSS PU College, Nanjangud was the Chief Guest. Sri D.G. Vishakantamurthy, Principal presided over the event. Other dignitaries were present Mr. Sreedhar. Physical Education Director, JSS Women's College, Kollegal, Smt T. Ranganayaki, Vice-Principal, Sri A.C. Naveen Kumar, and Sri M.S. Prasannakumar Sports Co-coordinators.

The programme started with march past led by the team leaders followed by students of each batch of GNM. The event was inaugurated by lighting the Sports Torch




followed by releasing the doves. The student representatives then pledged the oath administered by Sri Sreedhar, Physical Education Director, JSS Women's College, Kollegal.

The Chief Guest, Sri Doddappaji encouraged the students and called upon to develop physical talents to the maximum potential, engage in competitive activities which promotes sound health and physical fitness. He also motivated the students by sharing few motivational thoughts.

The presidential address was delivered by Sri D.G. Vishakantamurthy, Principal. He emphasized the value of sports for the student. Sports have an immense impact on a person's daily life and health. They do not just give an interesting routine but also a help build healthy body.

The winners of the march past were 2nd year GNM student. The inaugural ceremony ended with honoring the guests and vote of thanks. All the teaching and non-teaching faculty were present. A total of 12 events were conducted for both men and women category.

The Valedictory Ceremony was held on 7.5.2022 at the Sports Ground. Prizes were distributed to the winners. The Individual Championship was won by Sri Arogya Manu, 3rd Year GNM Student; Overall Championship was won by 3rd Year GNM students.

Mrs. B.P. Kavya, Tutor anchored the program. The programme concluded with vote of thanks and national anthem.



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಗೌರಿಗದ್ದೆ ಸ್ವರ್ಣಪೀಠಿಕಾಪುರಿ ಶ್ರೀ ದತ್ತ ಆಶ್ರಮದ ಅವಧೂತ ಶ್ರೀ ವಿನಯ್ ಗುರೂಜಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಅಭಿನಂದಿಸಿ ಹಾರೈಸಿದರು (14 ಏಪ್ರಿಲ್ 2022)



ಸುತ್ತೂರು ಶ್ರೀಕ್ಷೇತ್ರದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಜರುಗಿದ ಯುಗಾದಿ ಹಬ್ಬ ಹಾಗೂ ಅಲ್ಲಮಪ್ರಭುದೇವರ ಜಯಂತಿಯಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಗಮದ ನಿವೃತ್ತ ನಿರ್ದೇಶಕರಾದ ಶ್ರೀ ಶಂಕರ್ ದೇವನೂರುರವರು ಮಾತನಾಡಿದರು. ಪರಮಪೂಜ್ಯ ಜಗದ್ಗುರುಗಳೊಂದಿಗೆ ವಿವಿಧ ಮಠಾಧೀಶರುಗಳು, ಡಾ. ಎಸ್. ಶಿವರಾಜಪ್ಪ ಹಾಗೂ ಡಾ. ಕೆ.ಜಿ. ಪುಟ್ಟಹೊನ್ನಯ್ಯರವರಿದ್ದಾರೆ (2 ಏಪ್ರಿಲ್ 2022)

**Registered with the Registrar of Newspapers for India No. KARBIL/2014/66470**
**'JSS Varthapathra' Monthly, Vol. 7, Issue No. 5, May 2022**



ಮೈಸೂರಿನ ಸುತ್ತೂರು ಶ್ರೀಮಠಕ್ಕೆ ಮುಖ್ಯಮಂತ್ರಿಗಳಾದ ಸನ್ಮಾನ್ಯ ಶ್ರೀ ಬಸವರಾಜ ಎಸ್. ಬೊಮ್ಮಾಯಿಯವರು ಭೇಟಿ ನೀಡಿದ ಸಂದರ್ಭದಲ್ಲಿ ಪರಮಪೂಜ್ಯ ಜಗದ್ಗುರುಗಳವರು ಸನ್ಮಾನಿಸಿ ಆಶೀರ್ವದಿಸಿದರು (7 ಏಪ್ರಿಲ್ 2022)



ಮೈಸೂರಿನ ಜೆಎಸ್‌ಎಸ್ ವೈದ್ಯಕೀಯ ಕಾಲೇಜಿನ ಶ್ರೀ ರಾಜೇಂದ್ರ ಸಭಾಂಗಣದಲ್ಲಿ ಎಸ್‌ಎಫ್‌ಇ ಮೈಸೂರು ಛಾಪ್ಟರ್, ಜೆಎಸ್‌ಎಸ್ ಫಾರ್ಮಸಿ ಕಾಲೇಜು ಮತ್ತು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕ್ಯಾಡೆಮಿ ವತಿಯಿಂದ ಆಯೋಜಿಸಿದ್ದ ಭಾರತೀಯ ಸಾಂಪ್ರದಾಯಿಕ ಔಷಧಶಾಸ್ತ್ರ ಸಂಘದ 9ನೇ ಅಂತಾರಾಷ್ಟ್ರೀಯ ಸಮಾವೇಶವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಸಚಿವರಾದ ಡಾ. ಕೆ. ಸುಧಾಕರ್ ಉದ್ಘಾಟಿಸಿದರು. ಪ್ರೊ. ಪುಲೋಕ್ ಕೆ. ಮುಖರ್ಜಿ, ಶ್ರೀ ಇಂದ್ರನೀಲ್ ದಾಸ್, ಶ್ರೀ ಶೇಖರ್ ದತ್, ಡಾ. ಕೆ. ಮೃತ್ಯುಂಜಯ, ಡಾ. ಬಿ. ಮಂಜುನಾಥ್, ಡಾ. ಟಿ.ಎಂ. ಪ್ರಮೋದ್ ಕುಮಾರ್ ಹಾಗೂ ಡಾ. ಸುಭಾಷ್ ಸಿ. ಮಂಡಲ್‌ರವರುಗಳಿದ್ದಾರೆ (22 ಏಪ್ರಿಲ್ 2022)

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್‌ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821–2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್‌ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು
**ಬಿಡಿ ಪ್ರತಿ 10 ರೂ.**